ವಿಜಯಪುರ | ಸಂಪುಟ 04 | ಸಂಚಿಕೆ 159 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ


Editor: Indushekhar Manur

editor.udayarashmi@gmail.com

RNI NO: KARKAN/2023/86203

ಶನಿವಾರ, ಆಗಸ್ಟ್, 15, 2026

"ನಮ್ಮ ರಾಷ್ಟ್ರದ ಸ್ವಾತಂತ್ರ್ಯದ ಹೆಮ್ಮೆ ನಿಮ್ಮ ಹೃದಯದಲ್ಲಿ ಶಾಶ್ವತವಾಗಿ ಬೆಳಗಲಿ. ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ವೀರರನ್ನು ಸ್ಮರಿಸುತ್ತಾ, ನಮ್ಮೆಲ್ಲ ಓದುಗ ಬಂಧುಗಳಿಗೆ ಸ್ವಾತಂತ್ರ್ಯ ದಿನೋತ್ಸವದ ಶುಭಾಶಯಗಳು."



■ ಇಂದುಶೇಖರ ಮಣೂರ
ಸಂಪಾದಕರು
'ಉದಯರಶ್ಮಿ' ದಿನಪತ್ರಿಕೆ

## ಸಚಿವ ಡಾ. ಎಂ.ಬಿ.ಪಾಟೀಲ ಪ್ರವಾಸ ವಿವರ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಡಾ. ಎಂ.ಬಿ. ಪಾಟೀಲ ಅವರು ಆ. 14 ಮತ್ತು 15ರಂದು ವಿಜಯಪುರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಆ. 14ರಂದು ಸಂಜೆ 6 ಗಂಟೆಗೆ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕಲಬುರಗಿಗೆ ಪ್ರಯಾಣ ಬೆಳೆಸುವರು. ರಾತ್ರಿ 7:30 ಕ್ಕೆ ಕಲಬುರಗಿಯಿಂದ ರಸ್ತೆ ಮಾರ್ಗವಾಗಿ ವಿಜಯಪುರಕ್ಕೆ ಆಗಮಿಸುವರು.

ಆ. 15ರಂದು ಬೆಳಿಗ್ಗೆ 9 ಕ್ಕೆ ವಿಜಯಪುರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ ಆಯೋಜಿಸಿರುವ 80ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಬೆಳಿಗ್ಗೆ 11 ಗಂಟೆಗೆ ವಿಜಯಪುರ ಮಹಾನಗರ ಪಾಲಿಕೆ ವ್ಯಾಪ್ತಿಯ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ-2 ರಡಿ ಅರ್ಕಾಟ್ ದರ್ಗಾ, ಖಾದಿ ಗ್ರಾಮೋದ್ಯೋಗ ವೃತ್ತ ಹಾಗೂ ತಾಜೋದ್ದೀನ್ ಹೋಟೆಲ್ ಬಸ್ ನಿಲ್ದಾಣದ ಬಳಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸುವರು.

ಮಧ್ಯಾಹ್ನ 1 ಗಂಟೆಗೆ ಯತ್ನಾಳದಲ್ಲಿ ಯತ್ನಾಳ-ಜಾಲಗೇರಿ ರಸ್ತೆ ಸುಧಾರಣೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸುವರು. ಮಧ್ಯಾಹ್ನ 1:30ಕ್ಕೆ ಡೋಕಳೇವಾಡಿಯಲ್ಲಿ ಸೇತುವೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸುವರು. ಸಂಜೆ 4 ಗಂಟೆಗೆ ಕಾತ್ರಾಳದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಸ್ಥೆಯನ್ನು ಉದ್ಘಾಟಿಸುವರು. ಸಂಜೆ 6 ಗಂಟೆಗೆ ಶಿರಬೂರ ಗ್ರಾಮದಲ್ಲಿ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಸ್ಥೆ ನಿಯಮಿತ ಉದ್ಘಾಟಿಸಿ, ರಾತ್ರಿ ವಿಜಯಪುರದಲ್ಲಿ ವಾಸ್ತವ್ಯ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಸ್ವಾತಂತ್ರ್ಯ ದಿನಾಚರಣೆ ಪೂರ್ವಸಿದ್ಧತೆ ಪರಿಶೀಲಿಸಿದ ಡಿಸಿ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಆ.15ರಂದು ನಡೆಯಲಿರುವ ಸ್ವಾತಂತ್ರ್ಯ ದಿನಾಚರಣೆಯ ಹಿನ್ನೆಲೆಯಲ್ಲಿ ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಕೈಗೊಂಡಿರುವ ಪೂರ್ವ ಸಿದ್ಧತೆಗಳನ್ನು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಶುಕ್ರವಾರ ಪರಿಶೀಲಿಸಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಅಚ್ಚುಕಟ್ಟಾಗಿ, ಶಿಸ್ತುಬದ್ಧವಾಗಿ ಹಾಗೂ ಯಾವುದೇ ಲೋಪದೋಷಗಳಿಲ್ಲದೆ ನಡೆಯುವಂತೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು. ಕ್ರೀಡಾಂಗಣದಲ್ಲಿ ಧ್ವಜಾರೋಹಣ ವೇದಿಕೆ, ಪಥಸಂಚಲನ,ಗಣ್ಯರು ಹಾಗೂ ಸಾರ್ವಜನಿಕರ ಆಸನ ವ್ಯವಸ್ಥೆ, ಕುಡಿಯುವ ನೀರು, ಸ್ವಚ್ಛತೆ, ವಿದ್ಯುತ್ ವ್ಯವಸ್ಥೆ ಸೇರಿದಂತೆ ವಿವಿಧ ಸಿದ್ಧತೆಗಳನ್ನು ಅವರು ಪರಿಶೀಲಿಸಿ, ಕಾರ್ಯಕ್ರಮಕ್ಕೆ ಅಗತ್ಯವಿರುವ ಎಲ್ಲ ಸಿದ್ಧತೆಗಳನ್ನು ಪೂರ್ಣಗೊಳಿಸಿ, ವಿವಿಧ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸುವಂತೆ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಲಕ್ಷ್ಮಣ ನಿಂಬರಗಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮಲ್ಲನಗೌಡ ಬಿರಾದರ, ಮಹಾನಗರ ಪಾಲಿಕೆ ಆಯುಕ್ತರಾದ ವಿಜಯ ಮೆಕ್ಕಳಕಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಮಹೇಶ ಪೋತದಾರ, ವಿಜಯಪುರ ತಹಶೀಲ್ದಾರರಾದ ಪ್ರಶಾಂತ ಚನಗೊಂಡ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ರಾಜಶೇಖರ ದೈವಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಂತೋಷ ಬೋವಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ವಿಜಯಪುರ ಜಿಲ್ಲೆ ಕಲ್ಯಾಣ ಕರ್ನಾಟಕಕ್ಕೆ ಸೇರಿಸಲು ಒತ್ತಾಯಿಸಿ ಮನವಿ




■ ಉದಯರಶ್ಮಿ ದಿನಪತ್ರಿಕೆ

### ವಿಕಲಚೇತನರು, ವೃದ್ಧರು, ವಿಧವೆಯರ ಮಾಸಾಶನ ನಿಲುಗಡೆಗೆ ಆಕ್ರೋಶ

ಮುದ್ದೇಬಿಹಾಳ: ವಿಕಲಚೇತನರು, ವೃದ್ಧರು, ವಿಧವೆಯರು ಸೇರಿದಂತೆ ವಿವಿಧ ವರ್ಗದ ಫಲಾನುಭವಿಗಳಿಗೆ ನೀಡಲಾಗುತ್ತಿದ್ದ ಮಾಶಾಸನವನ್ನು ತಡೆಹಿಡಿದಿರುವದನ್ನು ತೀವ್ರ ವಿರೋಧಿಸಿ ಮತ್ತು ವಿಜಯಪುರ ಜಿಲ್ಲೆಯನ್ನು 371ಜೆ ಅಡಿ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸೇರಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ವಿಕಲಚೇತನರ ಹಾಗೂ ವಿವಿದೋದ್ದೇಶ ಮತ್ತು ಗ್ರಾಮೀಣ ಪುನರ್ವಸತಿ, ನಗರ ಪುನರ್ವಸತಿ ಕಾರ್ಯಕರ್ತರ ರಾಜ್ಯ ಒಕ್ಕೂಟದ ತಾಲೂಕು ಪದಾಧಿಕಾರಿಗಳು ಮತ್ತು ತಾಲೂಕು ವಿಕಲ ಚೇತನರ ಒಕ್ಕೂಟದ ಪದಾಧಿಕಾರಿಗಳು, ಪಟ್ಟಣದಲ್ಲಿ ಪ್ರತಿಭಟನಾ ರ್ಯಾಲಿ ನಡೆಸುವ ಮೂಲಕ ತಮ್ಮ ಹಲವು ಬೇಡಿಕೆಗಳನ್ನು ಈಡೇರಿಸಬೇಕು ಎಂದು ತಹಸೀಲ್ದಾರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಪಟ್ಟಣದ ಬಸವೇಶ್ವರ ವೃತ್ತದಿಂದ ಶುರುವಾದ ಪ್ರತಿಭಟನಾ ರ್ಯಾಲಿ ತಹಸೀಲ್ದಾರ ಕಚೇರಿವರೆಗೂ ಸಾಗಿತು.

ಅಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಒಕ್ಕೂಟದ ಜಿಲ್ಲಾಧ್ಯಕ್ಷ ಎಸ್.ಕೆ.ಘಾಟಿ, ತಾಲೂಕಾ ಕಾರ್ಯದರ್ಶಿ ರುದ್ರಗೌಡ ಗೌಡರ, ಸದಸ್ಯರಾದ ಶಿವಪುತ್ರ ಮೋಟಗಿ, ನಾಗೇಶ ಅಮರಾವತಿ, ನ್ಯಾಯವಾದಿ ಚಂದ್ರಶೇಖರ ಹೊಸಮನಿ ಮಾತನಾಡಿ, ಮಾಶಾಸನ ನೀಡಲು ವಾರ್ಷಿಕ ಆದಾಯ ಮಿತಿಯನ್ನು ರೂ. 32 ಸಾವಿರಕ್ಕೆ ನಿಗದಿಪಡಿಸಿರುವುದರಿಂದ ಫಲಾನುಭವಿಗಳಿಗೆ ಅನಾನುಕೂಲವಾಗುತ್ತಿದೆ. ಈ ಆದಾಯದ ಮಿತಿಯನ್ನು ಪರಿಷ್ಕರಿಸಬೇಕು. ಬಿಪಿಎಲ್ ಪಡಿತರ ಚೀಟಿಗೆ ಅನ್ವಯಿಸುವ ರೂ. 1.20 ಲಕ್ಷ ವಾರ್ಷಿಕ ಆದಾಯ ಮಿತಿಯನ್ನು ಸಾಮಾಜಿಕ ಭದ್ರತಾ ಯೋಜನೆಗಳಿಗೂ ಪರಿಗಣಿಸಬೇಕು. ಇಲ್ಲವಾದಲ್ಲಿ ಮಾಶಾಸನದಿಂದಲೇ ಜೀವನ ನಿರ್ವಹಣೆಗೆ ಅವಲಂಬಿತರಾದವರಿಗೆ ತಮ್ಮ ಜೀವನ ನಿರ್ವಹಿಸಲು ಪರದಾಡುವ ಪರಿಸ್ಥಿತಿ ಬಂದೊದಗುತ್ತದೆ ಎಂದರು.

ರಾಜ್ಯದಲ್ಲಿ ಹಿಂದುಳಿದ ಜಿಲ್ಲೆಯಾಗಿರುವ ವಿಜಯಪುರ ಜಿಲ್ಲೆಯ ನಿವಾಸಿಗಳಾದ ನಾವು 371ಜೆ ಮೀಸಲಾತಿಯಿಂದ ವಂಚಿತರಾಗಿದ್ದೇವೆ. ಕೂಡಲೇ ವಿಜಯಪುರ ಜಿಲ್ಲೆಯನ್ನು ಕಲ್ಯಾಣ ಕರ್ನಾಟಕಕ್ಕೆ ಸೇರ್ಪಡೆ ಮಾಡಬೇಕು. ಇಲ್ಲವಾದಲ್ಲಿ ಹೋರಾಟ ಉಗ್ರವಾಗಿಸುವದಾಗಿ ಎಚ್ಚರಿಸಿದರು.

ಮನವಿ ಪತ್ರಕ್ಕೆ ಉಮೇಶ ಜತ್ತಿ, ಅಡಿವೆಪ್ಪ ಕೊಡಗಾನೂರ, ಯಲ್ಲಪ್ಪ ಮಾದರ, ಸಂಗೀತಾ ಕೊಳೂರ, ಸಂಗನಗೌಡ ಬಗಲಿ, ಬಾಲಪ್ಪ ಬಿಸಲದಿನ್ನಿ, ಎಸ್.ಸಿ.ಮೇಟಿ ಸೇರಿದಂತೆ ಮತ್ತಿತರರು ಸಹಿ ಹಾಕಿದ್ದಾರೆ.

# ಸಚಿವ ಜಮೀರ್ ವರ್ತನೆ ದೇಶಕ್ಕೆ ಮಾಡಿದ ಅವಮಾನ : ಬಿಜೆಪಿ

## ಸಚಿವ ಜಮೀರ್ ಅಹ್ಮದ್ ಧ್ವಜಾರೋಹಣ ಮಾಡದಷ್ಟು ದೊಡ್ಡವರೇ? । ವಿಧಾನಸಭೆಯಲ್ಲಿ ಬಿಜೆಪಿ ಪ್ರತಿಭಟನೆ । ಸಚಿವ ಸ್ಥಾನದಿಂದ ವಜಾಕ್ಕೆ ಒತ್ತಾಯ



ಬೆಂಗಳೂರು: ಸ್ವಾತಂತ್ರ್ಯ ದಿನದಂದು ವಿಜಯನಗರದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸುವ ಕರ್ತವ್ಯದಿಂದ ವಿನಾಯಿತಿ ಕೋರಿದ ನಂತರ ಸಚಿವ ಬಿ.ಝಡ್. ಜಮೀರ್ ಅಹ್ಮದ್ ಖಾನ್ ಅವರ ಬದಲಿಗೆ ರಾಜ್ಯ ಸರ್ಕಾರ ಸಚಿವ ಕೆ.ಎಸ್. ಬಸವಂತಪ್ಪ ಅವರಿಗೆ ಆ ಜವಾಬ್ದಾರಿಯನ್ನು ವಹಿಸಿದೆ.

ಬೆಂಗಳೂರಿನ ಚಾಮರಾಜಪೇಟೆ ಕ್ಷೇತ್ರದ ಶಾಸಕರಾಗಿರುವ ಖಾನ್, ಸಮಯದ ಅಭಾವವನ್ನು ಕಾರಣವಾಗಿ ನೀಡಿ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಕೂಡ ನಿರಾಕರಿಸಿದ್ದಾರೆ. ಧ್ವಜಾರೋಹಣ ಕರ್ತವ್ಯದಿಂದ ವಿನಾಯಿತಿ ಕೋರಿದ ಸಚಿವರ ಕ್ರಮವನ್ನು ಬಿಜೆಪಿ ತೀವ್ರವಾಗಿ ವಿರೋಧಿಸಿದ್ದು, ಅವರನ್ನು ಸಂಪುಟದಿಂದ ಕೈಬಿಡುವಂತೆ ಆಗ್ರಹಿಸಿದೆ. ಈ ವಿಷಯವು ವಿಧಾನಸಭೆಯಲ್ಲಿ ಬಿಸಿಬಿಸಿ ಚರ್ಚೆಗೆ ಕಾರಣವಾಯಿತು.

ಸರ್ಕಾರ ಈ ವಿಷಯವನ್ನು ನಿರ್ವಹಿಸಿದ ರೀತಿಯನ್ನು "ಅಪಮಾನಕರ" ಎಂದು ಬಣ್ಣಿಸಿದ ಬಿಜೆಪಿ ಸದಸ್ಯರು ನಂತರ ಸದನದಿಂದ ಹೊರನಡೆದರು. ಈ ಎರಡೂ ಜವಾಬ್ದಾರಿಗಳಿಂದ ವಿನಾಯಿತಿ ಕೋರಿ ಜಮೀರ್ ಅಹ್ಮದ್ ಖಾನ್ ಗುರುವಾರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದರು.

ಮುಂದಿನ ದಿನಗಳಲ್ಲಿ ಉಃಂ ಸೇರಿದಂತೆ ಹಲವು ಸ್ಥಳೀಯ ಸಂಸ್ಥೆಗಳ ಚುನಾವಣೆಗಳು, ವಿಧಾನಸಭೆ ಉಪ ಚುನಾವಣೆ ಮತ್ತು ರಾಜ್ಯದಲ್ಲಿ ಪಕ್ಷ ಸಂಘಟನಾ ಚಟುವಟಿಕೆಗಳು ನಡೆಯಲಿವೆ. ಈ ಜವಾಬ್ದಾರಿಗಳನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾ ಉಸ್ತುವಾರಿ ಸಚಿವರ ಕರ್ತವ್ಯಗಳನ್ನು ನಿರ್ವಹಿಸಲು ನನಗೆ ಸಾಕಷ್ಟು ಸಮಯವಿರುವುದಿಲ್ಲ. ಹೀಗಾಗಿ ರಾಜ್ಯದ ಯಾವುದೇ ಜಿಲ್ಲೆಗೆ ನನ್ನನ್ನು ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ನೇಮಿಸದಂತೆ ನಿಮ್ಮಲ್ಲಿ ಕೋರುತ್ತೇನೆ. ಅಲ್ಲದೇ 15.08.2026 ರಂದು ಸ್ವಾತಂತ್ರ್ಯ ದಿನದಂದು ವಿಜಯನಗರದಲ್ಲಿ ಧ್ವಜಾರೋಹಣ ಮಾಡುವ ಜವಾಬ್ದಾರಿಯನ್ನು ನನಗೆ ವಹಿಸಲಾಗಿದೆ. ಅಲ್ಲಿಗೆ ಹಾಜರಾಗಲು ಸಾಧ್ಯವಾಗದ ಕಾರಣ, ಈ ಜವಾಬ್ದಾರಿಯಿಂದ ವಿನಾಯಿತಿಗೊಳಿಸುವಂತೆ ಕೋರುತ್ತೇನೆ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ವಿಜಯನಗರ ಜಿಲ್ಲೆಯಲ್ಲಿ ಬರ ಪರಿಸ್ಥಿತಿಯನ್ನು ಪರಿಶೀಲಿಸಿ ವರದಿ ಸಲ್ಲಿಸುವ ಜವಾಬ್ದಾರಿಯನ್ನು ಈ ಮೊದಲೇ ವಹಿಸಲಾಗಿತ್ತು. ಈಗಾಗಲೇ ಆ ವರದಿಯನ್ನು ಸಲ್ಲಿಸಿರುವುದಾಗಿ ಖಾನ್ ತಿಳಿಸಿದ್ದಾರೆ. ಅವರ ಪತ್ರದ ನಂತರ, ಸರ್ಕಾರವು ಪಟ್ಟಿಯನ್ನು ಪರಿಷ್ಕರಿಸಿ, ವಿಜಯನಗರದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣದ ಜವಾಬ್ದಾರಿಯನ್ನು ಬಸವಂತಪ್ಪ ಅವರಿಗೆ ವಹಿಸಿತು. ಖಾನ್ ಮತ್ತು ಬಸವಂತಪ್ಪ ಇಬ್ಬರೂ ಆಗಸ್ಟ್ 3 ರಂದು ಸಚಿವರಾಗಿ ಸಂಪುಟವನ್ನು ಸೇರಿದ್ದರು.

ವಸತಿ ಖಾತೆಯನ್ನು ಹೊಂದಿರುವ ಖಾನ್, ಹಿಂದಿನ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲೂ ವಿಜಯನಗರ ಜಿಲ್ಲೆಯ ಉಸ್ತುವಾರಿಯನ್ನು ಹೊಂದಿದ್ದರು.



ವಿಧಾನಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಹಿರಿಯ ಬಿಜೆಪಿ ಶಾಸಕ ಸುನಿಲ್ ಕುಮಾರ್, ಧ್ವಜಾರೋಹಣದ ಕರ್ತವ್ಯದಿಂದ ವಿನಾಯಿತಿ ಕೋರಿ ಖಾನ್ ಬರೆದ ಪತ್ರವು ರಾಷ್ಟ್ರೀಯ ಹಬ್ಬದ ಬಗ್ಗೆ ಅವರಿಗಿರುವ ಗಂಭೀರತೆಯ ಕೊರತೆಯನ್ನು ತೋರಿಸುತ್ತದೆ ಎಂದು ಹೇಳಿದರು. "ಒಬ್ಬ ಸಚಿವರು ರಾಷ್ಟ್ರೀಯ ಹಬ್ಬದಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೆ, ಅಂತಹ ಸಚಿವರು ಯಾಕೆ ಬೇಕು? ರಾಷ್ಟ್ರಧ್ವಜವನ್ನು ಹಾರಿಸಲು ಸಾಧ್ಯವಾಗದಷ್ಟು ಅವರು ಅಷ್ಟೊಂದು ದೊಡ್ಡವರೇ ಅಥವಾ ಅಷ್ಟೊಂದು ಬ್ಯುಸಿಯೇ?" ಎಂದು ಅವರು ಪ್ರಶ್ನಿಸಿದರು.

### ಸಚಿವರ ನಡೆ ಸಮರ್ಥಿಸಿಕೊಂಡ ಡಿಸಿಎಂ ಪರಮೇಶ್ವರ್



"ಸರ್ಕಾರವು ಸಚಿವರೊಬ್ಬರಿಂದ ಇಂತಹ ಪತ್ರವನ್ನು ಸ್ವೀಕರಿಸಿದ್ರಾ, ಇದೇನು? ಮುಖ್ಯಮಂತ್ರಿ ಅದನ್ನು ಸ್ವೀಕರಿಸಿ ಮತ್ತೊಬ್ಬ ಸಚಿವರಿಗೆ ಜವಾಬ್ದಾರಿ ನೀಡಿದ್ದಾರೆ. ರಾಷ್ಟ್ರಧ್ವಜ ಮತ್ತು ರಾಷ್ಟ್ರೀಯ ಆಚರಣೆಗೆ ಗೌರವವಿಲ್ಲವೇ? ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಲು ಸಾಧ್ಯವಾಗದ ಸಚಿವರು ನಮಗೆ ಏಕೆ ಬೇಕು?" ಎಂದು ಅವರು ಪತ್ರವನ್ನು ಪ್ರದರ್ಶಿಸುತ್ತಾ ಹೇಳಿದರು. ಉಪಮುಖ್ಯಮಂತ್ರಿ ಜಿ. ಪರಮೇಶ್ವರ್ ಮಾತನಾಡಿ ಖಾನ್ ಅವರನ್ನು ಸಮರ್ಥಿಸಿಕೊಂಡರು. ಖಾನ್ ಅವರು ಈಗಾಗಲೇ ವಿಜಯನಗರದಲ್ಲಿ ಸೇವೆ ಸಲ್ಲಿಸಿರುವುದರಿಂದ ಅವರಿಗೆ ಬೇರೆ ಜಿಲ್ಲೆಯನ್ನು ನೀಡಬೇಕೆಂಬುದು ಅವರ ಉದ್ದೇಶವಾಗಿರುವಂತೆ ತೋರುತ್ತದೆ. ವಿಜಯನಗರ ದೂರವಿರುವುದರಿಂದ ಅಲ್ಲಿಗೆ ಹೋಗಲು ಅವರಿಗೆ ಅನಾರೋಗ್ಯದ ಸಮಸ್ಯೆಯಿದೆ. ಹೀಗಾಗಿ ಅವರು ಮನವಿ ಸಲ್ಲಿಸಿದ್ದಾರೆ ಎಂದು ಪರಮೇಶ್ವರ್ ತಿಳಿಸಿದರು.

# ವಿಜಯಪುರ ನಗರಾಭಿವೃದ್ಧಿಗೆ ಹೊಸ ಚೈತನ್ಯ

## ವಿಜಯಪುರ ಅಭಿವೃದ್ಧಿ ಪ್ರಾಧಿಕಾರಕ್ಕೆ ಐವರು ನಾಮನಿರ್ದೇಶಿತ ಸದಸ್ಯರ ನೇಮಕ । ವಿಡಿಎ ಅಧ್ಯಕ್ಷರ ನೇತೃತ್ವದಲ್ಲಿ ಪದಗ್ರಹಣ ಸಮಾರಂಭ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ಯೋಜನಾ ವ್ಯಾಪ್ತಿಯ ಸಮಗ್ರ ಅಭಿವೃದ್ಧಿ, ಸಾರ್ವಜನಿಕರಿಗೆ ಅಗತ್ಯ ಮೂಲಸೌಕರ್ಯ ಮತ್ತು ನಾಗರಿಕ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ನಗರಾಭಿವೃದ್ಧಿ ಇಲಾಖೆಯು ಪ್ರಾಧಿಕಾರಕ್ಕೆ ಐವರು ನೂತನ ನಾಮನಿರ್ದೇಶಿತ ಸದಸ್ಯರನ್ನು ನೇಮಕ ಮಾಡಿದೆ.

ನೂತನ ನಾಮನಿರ್ದೇಶಿತ ಸದಸ್ಯರಾಗಿ ರಮೇಶ್ ಶ್ರೀಶೈಲ್ ಆಳೂರ, ಅಬ್ದುಲ್ ಖಾದರ್ ಖಾದಿಮ, ರಮೇಶ್ ಬಾಬು ಲಮಾಣಿ, ಜಯಶ್ರೀ ಹರಿಶ್ಚಂದ ಭಾರತೆ ಹಾಗೂ ಆನಂದ ದುಂಡಪ್ಪ ಕುಸೂರ ಅವರನ್ನು ನೇಮಕ ಮಾಡಲಾಗಿದೆ.

ನೂತನ ಸದಸ್ಯರ ನೇಮಕದಿಂದ ವಿಜಯಪುರ ನಗರದ ಅಭಿವೃದ್ಧಿ ಕಾರ್ಯಗಳಿಗೆ ಮತ್ತಷ್ಟು ವೇಗ ದೊರೆಯಲಿದೆ. ನಗರದ ರಸ್ತೆ, ಒಳಚರಂಡಿ, ಬೀದಿದೀಪ, ಉದ್ಯಾನವನಗಳ ಅಭಿವೃದ್ಧಿ, ಸಂಚಾರ ವ್ಯವಸ್ಥೆ ಸೇರಿದಂತೆ ಸಾರ್ವಜನಿಕ ಮೂಲಸೌಕರ್ಯ ಹಾಗೂ ನಾಗರಿಕ ಸೌಲಭ್ಯಗಳ ಸುಧಾರಣೆಗೆ ಆದ್ಯತೆ ನೀಡಲಾಗುವುದು ಎಂದು ನೂತನ ಸದಸ್ಯರು ತಿಳಿಸಿದ್ದಾರೆ.

ಶುಕ್ರವಾರ ನಡೆದ ಪದಗ್ರಹಣ ಸಮಾರಂಭದಲ್ಲಿ ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಗಂಗಾಧರ ಸಂಬಣ್ಣಿ, ಪ್ರಾಧಿಕಾರದ ಆಯುಕ್ತ ರಾಜಶೇಖರ ಡಂಬಳ, ಸಹಾಯಕ ಕಾರ್ಯಪಾಲಕ ಅಭಿಯಂತರ ಶಂಭುಲಿಂಗ ಹೇರಲಗಿ, ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ವಸಂತ ಹೊನಮೋಡೆ, ಸೋಮನಾಥ ಕಳ್ಳಿಮನಿ ಸೇರಿದಂತೆ ಅಧಿಕಾರಿ ಸಿಬ್ಬಂದಿ ಉಪಸ್ಥಿತರಿದ್ದರು.

# ಕೂಲಿಕಾರರಿಗೆ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಿ

## ಸಾತಿಹಾಳ ಗ್ರಾಮದ ವಿಬಿಜಿ-ರಾಮ್ ಜಿ ಯೋಜನೆ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ಜಿಪಂ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ ಅಧಿಕಾರಿಗಳಿಗೆ ಸೂಚನೆ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಕಾಮಗಾರಿ ಸ್ಥಳದಲ್ಲಿ ಕೂಲಿಕಾರರಿಗೆ ಅಗತ್ಯ ಮೂಲಭೂತ ಸೌಲಭ್ಯಗಳು ಕಡ್ಡಾಯವಾಗಿ ಲಭ್ಯವಿರುವಂತೆ ನೋಡಿಕೊಳ್ಳುವುದು ಅಗತ್ಯ ಎಂದು ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ ಹೇಳಿದರು.

ತಾಲ್ಲೂಕಿನ ಸಾತಿಹಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೋನಾಬಾಯಿ ಹಳ್ಳದ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಶುಕ್ರವಾರ ಭೇಟಿ ನೀಡಿ ಕಾಮಗಾರಿಯ ಪ್ರಗತಿ, ಕೂಲಿಕಾರರ ಹಾಜರಾತಿ ಹಾಗೂ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ ಅವರು ಮಾತನಾಡಿದರು. ಕಾಮಗಾರಿ ಸ್ಥಳದಲ್ಲಿ ಕುಡಿಯುವ ನೀರು, ನೆರಳಿನ ವ್ಯವಸ್ಥೆ ಹಾಗೂ ಪ್ರಥಮ ಚಿಕಿತ್ಸಾ ಪೆಟ್ಟಿಗೆ ಇರುವಂತೆ ಪಿಡಿಓ ಕ್ರಮ ವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಪ್ರತಿದಿನ ಎನ್‌ಎಂಎಂಎಸ್ ಆ್ಯಪ್ ಮೂಲಕ ಕಡ್ಡಾಯವಾಗಿ ಹಾಜರಾತಿ ದಾಖಲಿಸುವಂತೆ ಟಿಆರ್‌ಎಂ ಅವರಿಗೆ ನಿರ್ದೇಶನ ನೀಡಿದರು.

ಕೂಲಿಕಾರರಿಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಕೂಲಿ ಆಧಾರಿತ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆಗೊಳಿಸುವಂತೆ ಪಿಡಿಓ ಅವರಿಗೆ ಸೂಚಿಸಿದರು.

ನಂತರ ಕೂಲಿಕಾರರೊಂದಿಗೆ ಸಂವಾದ ನಡೆಸಿ, ವಿಬಿಜಿ-ರಾಮ್ ಜಿ ಯೋಜನೆಯ ಉದ್ದೇಶ ಹಾಗೂ ಪ್ರಯೋಜನಗಳ ಕುರಿತು ಮಾಹಿತಿ ನೀಡಿದರು.

ತಾಪಂ ಇಓ ಭಾರತಿ ಚಲುವಯ್ಯ ಮಾತನಾಡಿದರು.

ಗ್ರಾಮೀಣ ಉದ್ಯೋಗ ಸಹಾಯಕ ನಿರ್ದೇಶಕ ಶಾಂತಗೌಡ ನ್ಯಾಮಣ್ಣವರ, ಪಂಚಾಯತ್ ರಾಜ್ ಸಹಾಯಕ ನಿರ್ದೇಶಕ ಶಿವಾನಂದ ಮೂಲಿಮನಿ, ತಾಂತ್ರಿಕ ಸಂಯೋಜಕ ಶರಣಗೌಡ ಪಾಟೀಲ, ಐಇಸಿ ಸಂಯೋಜಕ ಸಿದ್ದು ಕಾಂಬಳೆ, ತಾಂತ್ರಿಕ ಸಹಾಯಕರಾದ ಅರ್ಷದ್ ಕೊಟ್ನಾಳ, ಶೋಹೆಬ್ ಮಾರಡಗಿ, ಪಿಡಿಓ ಎಂ.ಎನ್. ಕತ್ತಿ, ಟಿಆರ್‌ಎಂ ವಿನೋದ ಚವ್ಹಾಣ ಇದ್ದರು.

# ಮಕ್ಕಳಲ್ಲಿ ಸಂವಹನ ಶೀಲತೆ

## ನಾವು - ನಮ್ಮವರು

### (ಮಕ್ಕಳ ಬೆಳವಣಿಗೆಯಲ್ಲಿ ಪಾಲಕರ ಪಾತ್ರ ಕುರಿತ ಲೇಖನ ಮಾಲಿಕೆ)

■ ಉದಯರಶ್ಮಿ ದಿನಪತ್ರಿಕೆ

ಮನುಷ್ಯ ಸಮಾಜ ಜೀವಿ ಯಾವುದೇ ವ್ಯಕ್ತಿಯಾದರೂ ತನ್ನ ಸುತ್ತಲಿನ ಸಮಾಜದಲ್ಲಿ ನಡೆಯುತ್ತಿರುವ ಆಗುಹೋಗುಗಳನ್ನು ಗಮನಿಸುತ್ತಿರಬೇಕು. ರಾಜಕೀಯ, ಕೌಟುಂಬಿಕ, ಧಾರ್ಮಿಕ, ಸಾಮುದಾಯಿಕ ಹೀಗೆ ಹತ್ತು ಹಲವು ವಿಷಯಗಳಲ್ಲಿ ಆತನ ಗಮನ ಸೆಳೆಯುವ ವಿಷಯಗಳನ್ನು ಮಾತ್ರವಲ್ಲದೆ ಬದುಕಿಗೆ ಹತ್ತಿರವಾದ ವಿಷಯಗಳನ್ನು ಆತ ಅರಿಯುವ ಅವಶ್ಯಕತೆ ಇದ್ದೇ ಇದೆ. ಇದು ಆತ ಬದುಕನ್ನು ಇನ್ನಷ್ಟು ಹೆಚ್ಚು ಅರ್ಥಪೂರ್ಣವಾಗಿ ಬದುಕಲು ಸಹಾಯಮಾಡುತ್ತದೆ.

ಕೊರೋನಾ ಪ್ಯಾಂಡಮಿಕ್ ನಂತರ ಮಕ್ಕಳ ನಡವಳಿಕೆಯಲ್ಲಿನ ವಿಪರೀತ ಬದಲಾವಣೆಗಳನ್ನು ನಾವು ಗಮನಿಸಿ ನೋಡಿದಾಗ ಮಕ್ಕಳು ಬಹುತೇಕ ಅಂತರ್ಮುಖಿಗಳಾಗಿದ್ದು ತಾವಾಯಿತು, ತಮ್ಮ ಕೈಯಲ್ಲಿನ ಎಲೆಕ್ಟ್ರಾನಿಕ್ ಗ್ಯಾಜೆಟ್ ಆಯಿತು ಎಂಬಂತೆ ಬದುಕುತ್ತಿದ್ದಾರೆ. ಒಂದೇ ಕೋಣೆಯಲ್ಲಿ ಹಲವು ಮಕ್ಕಳು ಕುಳಿತಿದ್ದರೂ ಅವರ ಕೈಯಲ್ಲಿ ಮೊಬೈಲ್ ಇದ್ದಾಗ ಪರಸ್ಪರ ಸಂವಹನಕ್ಕೆ ದಾರಿ ಇಲ್ಲದಂತೆ ಬಾಳುತ್ತಿದ್ದಾರೆ. ಇನ್ನು ಕೆಲವು ಮನೆಗಳಲ್ಲಿ ಮಕ್ಕಳು ತಮ್ಮ ಕೋಣೆಯನ್ನು ಸೇರಿ ತಮ್ಮ ಮೊಬೈಲಿನೊಂದಿಗೆ ಭ್ರಮಾ ಲೋಕದಲ್ಲಿ ವಿಹರಿಸುತ್ತಿದ್ದಾರೆ ಇದು ಕೇವಲ ಮಕ್ಕಳಿಗೆ ಮಾತ್ರ ಅನ್ವಯವಾಗುತ್ತಿಲ್ಲ, ಪಾಲಕರು ಕೂಡ ಇತ್ತೀಚೆಗೆ ಮೊಬೈಲ್ ನ ದಾಸರಾಗಿದ್ದಾರೆ.

ಈ ಹಿಂದೆ ಮನೆಯಲ್ಲಿ ಸಾಯಂಕಾಲದ ಸಮಯದಲ್ಲಿ ಹೊರಗಿನ ಗಾಳಿಯನ್ನು ಸೇವಿಸುತ್ತಾ ಒಂದಷ್ಟು ಹೊತ್ತು

ಮನೆಯ ಕಟ್ಟೆಯ ಮೇಲೆ ಕುಳಿತು ನಿಶ್ಚಿಂತೆಯ ವಿರಾಮವನ್ನು ನಮ್ಮ ಪಾಲಕರು ಅನುಭವಿಸುತ್ತಿದ್ದರು. ನಂತರ ಎದ್ದು ತಮ್ಮ ಸಾಯಂಕಾಲದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು.

ಆಗಿನ ಮಕ್ಕಳಾದರೂ ಅಷ್ಟೇ, ಕೇವಲ ಶಾಲೆಯ ಪಠ್ಯ ವಿಷಯಗಳನ್ನು ಮಾತ್ರ ಕಲಿಯದೇ ಶಾಲೆಗೆ ಹೋಗುವ ಮುನ್ನ ತಮ್ಮ ನಿತ್ಯ ವಿಧಿಗಳನ್ನು ಪೂರೈಸಿ ಮನೆಯ ಕೆಲಸಗಳಲ್ಲಿ ತಮಗೆ ವಹಿಸಲಾಗಿರುವ ಕೆಲಸಗಳನ್ನು ಪೂರೈಸಿ ಶಾಲೆಗೆ ತೆರಳುತ್ತಿದ್ದರು. ಮತ್ತೆ ಮಧ್ಯಾಹ್ನ ಶಾಲೆಯಿಂದ ಮನೆಗೆ ಮರಳಿದ ನಂತರ ಕೈಕಾಲು ಮುಖ ತೊಳೆದು ಮನೆಯಲ್ಲಿ ತಾಯಿ ಹೇಳಿದ ಇಲ್ಲವೇ ತಮಗೆ ನಿಗದಿಯಾದ ಕೆಲಸಗಳನ್ನು ಪೂರೈಸಿ ಆಟವಾಡುತ್ತಿದ್ದರು. ನಂತರ ಮನೆಗೆ ಬಂದು






ಮತ್ತೊಮ್ಮೆ ಕೈ ಕಾಲು ಮುಖ ತೊಳೆದು ಸಾಮೂಹಿಕವಾಗಿ ದೇವರ ಮುಂದೆ ಪ್ರಾರ್ಥನೆ ಹೇಳಿ ಓದಲು, ಬರೆಯಲು ಕುಳಿತುಕೊಳ್ಳುತ್ತಿದ್ದರು. ಒಂದೆರಡು ಗಂಟೆಗಳ ಅಭ್ಯಾಸದ ನಂತರ ಊಟ ಮಾಡಿ ತಾವೇ ಹಾಸಿಗೆ ಹಾಸಿಕೊಂಡು ಮಲಗಿದರೆ ಎಚ್ಚರವಾಗುತ್ತಿದ್ದು ಮರುದಿನ ಮುಂಜಾನೆಗೆ.

ಇನ್ನು ಕೆಲವೊಮ್ಮೆ ರಜಾ ದಿನಗಳಲ್ಲಿ ಹೊಲಗಳಲ್ಲಿ ರೈತಾಪಿ ಕೆಲಸ ಕಾರ್ಯಗಳಾದ ಕಳೆ ತೆಗೆಯುವ ಶೇಂಗಾದ ಬುಡ್ಡಿ ಬಿಡಿಸುವ ರಾಶಿ ಮಾಡುವ ಹರಗುವ ಬಿತ್ತುವ, ದನಗಳಿಗೆ ನೀರು ಕೊಡಿಸುವ ಅವುಗಳ ಮೈ ತೊಳೆಯುವ ಅವುಗಳಿಗಾಗಿ ಹಸಿ ಹುಲ್ಲನ್ನು ಕಿತ್ತು ತರುವ, ಮೇವನ್ನು ಹಾಕುವ ಅವುಗಳನ್ನು ತಂದು ಕಟ್ಟುವ ಕೆಲಸಗಳಲ್ಲಿ ಭಾಗವಹಿಸುವುದು, ಮಾರುಕಟ್ಟೆಗೆ ಹೋಗಿ ತರಕಾರಿ, ದಿನಸಿಗಳನ್ನು ತರುವುದು ಹೆಣ್ಣು ಮಕ್ಕಳಾದರೆ ಮನೆಯಲ್ಲಿ ತಾಯಿಯ ಕೈಯಲ್ಲಿ ಅಡುಗೆಗೆ ಹೆಚ್ಚುವ, ಹೆರೆಯುವ,ತುರಿಯುವ, ಸೋಸುವ, ಜರಡಿ ಹಿಡಿಯುವ, ಹಿಟ್ಟು ನಾದುವ, ಹುಟ್ಟುವ ಬೀಸುವ ಕೆಲಸಗಳಲ್ಲಿ ಪಾಲಕರಿಗೆ ಸಹಾಯಕರಾಗಿ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಿದ್ದರು ಪಾತ್ರೆ ಬಟ್ಟೆ ಕಸ ಗುಡಿಸುವುದು ಹೀಗೆ ಹತ್ತು ಹಲವು ಮನೆಯ ಕೆಲಸಗಳಲ್ಲಿ ಮಕ್ಕಳು ಭಾಗಿಯಾಗುತ್ತಿದ್ದರು. ಮಕ್ಕಳಿಗೆ ವ್ಯವಹಾರದ ಚಾಕಚಕ್ಯತೆ, ಚೌಕಾಶಿ ಮಾಡುವ, ತಾನು ತರುವ ವಸ್ತುವಿನ ತಾಜಾತನ ಗುಣಮಟ್ಟದ ಅರಿವು ಮೂಡುತ್ತಿತ್ತು.

ಇಂದು ಪಾಲಕರು ತಮ್ಮ ಮಕ್ಕಳನ್ನು ಸುಮ್ಮನೆ ಕುಳಿತುಕೊಳ್ಳಲು ಹೇಳಿ ಮಕ್ಕಳ ಕೈಯಲ್ಲಿ ಮೊಬೈಲ್ ಇಡುತ್ತಾರೆ, ಹೀಗೆ ಮೊಬೈಲ್ ಹಿಡಿದು ಒಂದೆಡೆ ಕುಳಿತುಕೊಂಡು ವಿಡಿಯೋಗಳನ್ನು ನೋಡುವ ಮಗು ಮುಂದೆ ಅತಿಯಾದ ಮೊಬೈಲ್ನ ಅಭ್ಯಾಸದಿಂದ ಉಂಟಾಗುವ ಖಿನ್ನತೆ, ಗೀಳು ರೋಗಗಳಿಗೆ ಬಲಿಯಾಗುತ್ತದೆ. ಇದನ್ನು ಹೋಗಲಾಡಿಸಲು ಪಾಲಕರು ಸಾಧ್ಯವಾದಷ್ಟು ಮಕ್ಕಳನ್ನು ಹೊರಗಿನ ಪ್ರಪಂಚದ ಜನರೊಂದಿಗೆ ಬೆರೆಯಲು, ಸಂವಹನ ಮಾಡಲು ಬಿಡಬೇಕು

ಕಡ್ಡಾಯವಾಗಿ ಮೊಬೈಲ್ ಡಯಟ್ ಅಂದರೆ ಊಟದ ಸಮಯದಲ್ಲಿ ಮೊಬೈಲ್ ಊಟದ ಟೇಬಲ್ ಗೆ ತರಬಾರದು, ಪೂಜೆ ಪುನಸ್ಕಾರಗಳ, ಭಜನೆ ಚಿಂತನೆಗಳನ್ನು ಮಾಡುವ ಸಮಯದಲ್ಲಿ ಮೊಬೈಲ್ ಬಳಸಲೇಬಾರದು ಎಂದು ಮನೆಯಲ್ಲಿ ರೂಢಿಸಬೇಕು. ಮಕ್ಕಳಿಗೆ ಬೆಳೆಯಲು ಅವಕಾಶ ಸಿಗುವ ಕಡೆ ಕಡ್ಡಾಯವಾಗಿ ಅವರನ್ನು ತೊಡಗಿಸಬೇಕು. ಪಾಲಕರು ತಮ್ಮ ಮಕ್ಕಳಿಗೆ ಮನೆಗೆ ಬರುವ ಕರೆಂಟ್ ಬಿಲ್ ಪೇಪರ್ ಬಿಲ್ ಮತ್ತಿತರ ಹಣಕಾಸಿನ ವ್ಯವಹಾರಕ್ಕೆ ಬರುವ ವ್ಯಕ್ತಿಗಳೊಂದಿಗೂ ಮಾತನಾಡಲು ತೊಡಗಿಸಬೇಕು. ಇನ್ನು ಮುಖ್ಯವಾಗಿ ತರಕಾರಿ, ಹಣ್ಣು ಹಂಪಲು ಮಾರುವವರ ಬಳಿ ಮಕ್ಕಳನ್ನು



ಅವರೆಣಟಿಜಜಜಿಟಿಜಜಕೆ ಆ ವೃತ್ತಿಯನ್ನು ಆಯ್ದುಕೊಂಡರು ಎಂದು ಕೇಳಿ ಉತ್ತರ ಪಡೆಯಲು ಹೇಳಬೇಕು. ಹಾಗೆ ಅವರು ಕೊಡುವ ಉತ್ತರ ನಾನು ಶಾಲೆಯಲ್ಲಿ ವಿದ್ಯೆಯನ್ನು ಕಲಿಯಲು ಸಾಧ್ಯವಾಗಲಿಲ್ಲ ಆದ–'ಕಾರಣ ಇಂದು ಈ ಕೆಲಸವನ್ನು ಮಾಡುತ್ತಿದ್ದೇನೆ ಎಂದು ಹೇಳಿದಾಗ ಆ ಮಾತುಗಳು ಮಕ್ಕಳ ಮೇಲೆ ಬೀರುವ ಪರಿಣಾಮ ಮುಂದೆಂದೂ



ಮಕ್ಕಳು ಓದನ್ನು ನಿರ್ಲಕ್ಷಿಸದಂತೆ ಮಾಡುತ್ತದೆ.

ಚಿಕ್ಕ ವಯಸ್ಸಿನಲ್ಲಿ ಅಯ್ಯೋ! ಪಾಪ ಮಕ್ಕಳಿಗೆ ಏನು ತಿಳಿಯುತ್ತದೆ ಎಂದು ಅವರು ಹರಡುವ ಎಲ್ಲ ಸಾಮಾನುಗಳನ್ನು ಎತ್ತಿಡುವ ತಾಯಿ ಮುಂದಿನ ಇಪ್ಪತ್ತು ವರ್ಷಗಳ ಕಾಲ ಅದೇ ಕೆಲಸವನ್ನು ಮಕ್ಕಳ ಮೇಲೆ ಗೊಣಗುತ್ತ ಮಾಡಬೇಕಾಗುತ್ತದೆ ಬದಲಾಗಿ ಮಕ್ಕಳು ಚಿಕ್ಕವರಿದ್ದಾಗಲೇ ಅವರವರ ಕೆಲಸಗಳನ್ನು ಅವರೇ ಮಾಡಿಕೊಳ್ಳುವಂತೆ ಮಕ್ಕಳಿಗೆ ರೂಢಿಸಬೇಕು. ಇದರ ಜೊತೆಗೆ ಮನೆಯ ಕೆಲಸಗಳಲ್ಲಿ ಕೂಡ ಮಕ್ಕಳ ಪಾತ್ರದ ಅವಶ್ಯಕತೆ ಇದ್ದು ಮನೆಗೆ ಬರುವ ಹೋಗುವವರ ಜೊತೆ ಮಾತನಾಡುವ, ವಿಚಾರಿಸುವ, ನೀರು ತಂದುಕೊಡುವ ಹಿರಿಯರು ಹೇಳಿದ ಚಿಕ್ಕ ಪುಟ್ಟ ಕೆಲಸಗಳನ್ನು ಮಾಡುವ ನಿಟ್ಟಿನಲ್ಲಿ ಮಕ್ಕಳನ್ನು ಬೆಳೆಸಬೇಕು. ಇದು ಮಕ್ಕಳಲ್ಲಿನ ಸಾಮಾನ್ಯ ಜ್ಞಾನವನ್ನು ಹೆಚ್ಚಿಸುತ್ತದೆ.

ನೀವು ಸಾಕಷ್ಟು ಆಸ್ತಿಯನ್ನು ಮಾಡಿಟ್ಟು ಭವ್ಯವಾದ ಮನೆ, ಬ್ಯಾಂಕಿನಲ್ಲಿ ಸಾಕಷ್ಟು ಹಣವನ್ನು ಇಟ್ಟರೂ ಕೂಡ ಅದೆಲ್ಲವನ್ನು ನೋಡಿಕೊಳ್ಳಲು ಮಕ್ಕಳಲ್ಲಿ ವ್ಯವಹಾರಿಕ ಜಾಣ್ಮೆ ಬೇಕಲ್ಲವೇ? ಅಂತಹ ವ್ಯಾವಹಾರಿಕ ಜಾಣ್ಮೆ ಮಕ್ಕಳಲ್ಲಿ ಬೆಳೆಯಬೇಕಾದರೆ ಮಕ್ಕಳು ಸಾಮಾನ್ಯರಲ್ಲಿ ಸಾಮಾನ್ಯರಾಗಿ ಬೆರೆಯಬೇಕು, ಬೆರತು ಬಾಳಿನ ಪಾಠಗಳನ್ನು ಅಗೋಚರವಾಗಿ ಕಲಿಯಬೇಕು. ಮಕ್ಕಳಿಗಾಗಿ ಆಸ್ತಿಯನ್ನು ಮಾಡುವ ಬದಲು ಮಕ್ಕಳನ್ನೇ ಆಸ್ತಿಯನ್ನಾಗಿ ಬೆಳೆಸಬೇಕು.

ಲೇಖನ
■ ವೀಣಾ ಹೇಮಂತಗೌಡ ಪಾಟೀಲ್.
ಮುಂಡರಗಿ
ಗದಗ ಜಿಲ್ಲೆ



# ಕಾಯಕದ ಪರಿಮಳ ಜೀವಂತವಾಗಿರುವ ಪುಣ್ಯಭೂಮಿ ದೇವರಹಿಪ್ಪರಗಿ

## ಶರಣ ಮಡಿವಾಳ ಮಾಚಿದೇವರ ಸಾನ್ನಿಧ್ಯದಲ್ಲಿ ಒಬ್ಬ ಶಿಕ್ಷಕನ ಆತ್ಮಯಾನ

■ ಉದಯರಶ್ಮಿ ದಿನಪತ್ರಿಕೆ

ಕೆಲವು ಪ್ರವಾಸಗಳು ನಮ್ಮನ್ನು ಹೊಸ ಸ್ಥಳಗಳಿಗೆ ಕರೆದೊಯ್ಯುತ್ತವೆ. ಕೆಲವು ಪ್ರವಾಸಗಳು ಹೊಸ ವ್ಯಕ್ತಿಗಳನ್ನು ಪರಿಚಯಿಸುತ್ತವೆ. ಆದ–'ರೆ ಅಪರೂಪದ ಕೆಲವು ಪಯಣಗಳು ನಮ್ಮೊಳಗಿನ ಮನುಷ್ಯನನ್ನೇ

ಹೊಸದಾಗಿ ಪರಿಚಯಿಸುತ್ತವೆ. ಅಂತಹ ಒಂದು ಅನುಭವ ಇತ್ತೀಚೆಗೆ ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿಯಲ್ಲಿ ನನಗೆ ದೊರೆಯಿತು. ಬಿ.ಇಡಿ. ವಿದ್ಯಾರ್ಥಿಗಳ ಪಾಠ ವೀಕ್ಷಣೆಯ ನಿಮಿತ್ತ ದೇವರ ಹಿಪ್ಪರಗಿಗೆ ತೆರಳಿದ್ದೆ. ಶಾಲೆಯ ಶೈಕ್ಷಣಿಕ ಚಟುವಟಿಕೆಗಳನ್ನು ವೀಕ್ಷಿಸಿದ ನಂತರ, ಅಲ್ಲಿಂದ ನೇರವಾಗಿ ಹಿಂದಿರುಗಲು ಮನಸ್ಸು ಒಪ್ಪಲಿಲ್ಲ. ನನ್ನೊಳಗಿನ ಶಿಕ್ಷಕನಿಗಿಂತ ಲೇಖಕ ಹೆಚ್ಚು ಜಾಗೃತನಾಗಿದ್ದ. ನನ್ನ ಹೆಜ್ಜೆಗಳು ಸಹಜವಾಗಿಯೇ ಶರಣ ಮಡಿವಾಳ ಮಾಚಿದೇವರ ಸ್ಮಾರಕದತ್ತ ಸಾಗಿದವು.

ದೂರದಿಂದಲೇ ಕಣ್ಣಿಗೆ ಬೀಳುವ ದೇವಾಲಯದ ಭವ್ಯ ಗೋಪುರ, ಅಚ್ಚುಕಟ್ಟಾಗಿ ಸಂರಕ್ಷಿಸಲ್ಪಟ್ಟ ಆವರಣ, ಗಂಭೀರವಾಗಿ ನಿಂತ ದೀಪಸ್ತಂಭ ಮತ್ತು ಮೌನವನ್ನು ಸಂಗೀತವನ್ನಾಗಿಸಿಕೊಂಡ ವಾತಾವರಣ ಇವೆಲ್ಲವೂ ಮನಸ್ಸಿಗೆ ಹೇಳಲಾರದ ನೆಮ್ಮದಿಯನ್ನು ನೀಡಿದವು. ದೇವಾಲಯದ ಪ್ರವೇಶ ದ್ವಾರದಲ್ಲಿ ನಿಂತಾಗ ಅನಿಸಿತು ನಾನು ಕೇವಲ ಒಂದು ದೇವಾಲಯದೊಳಗೆ ಪ್ರವೇಶಿಸುತ್ತಿಲ್ಲ ಎಂಟು ಶತಮಾನಗಳ ಇತಿಹಾಸದೊಳಗೆ ಹೆಜ್ಜೆಯಿಡುತ್ತಿದ್ದೇನೆ. ಗರ್ಭಗುಡಿಯ ಎದುರು ಶಾಂತವಾಗಿ ಕುಳಿತಿದ್ದ ನಂದಿ, ಕಲ್ಲಿನ ಕಂಬಗಳ ಮೇಲಿನ ಕಲಾತ್ಮಕ ಕೆತ್ತನೆಗಳು, ಗದ್ದುಗೆಯ ಸುತ್ತಲಿನ ಪ್ರಶಾಂತ ವಾತಾವರಣ ಇವೆಲ್ಲವೂ ಮೌನದಲ್ಲೇ ಒಂದು ಮಹಾನ್ ಸಂದೇಶವನ್ನು ಹೇಳುತ್ತಿದ್ದವು. ಅಲ್ಲಿ ನಿಂತ ಕ್ಷಣದಲ್ಲಿ ನನ್ನ ಮನಸ್ಸಿನಲ್ಲಿ ಜನಪದದ ಆ ಪ್ರಸಿದ್ಧ ಸಾಲುಗಳು ಪ್ರತಿಧ್ವನಿಸಿದವು

**"ಹಿಪ್ಪರಗಿ ಮೆರೆಯುತಿರಲಿ ಉಪ್ಪರಗಿ ಆಗೆಂದು,**
**ತುಪ್ಪ ಹೊಳೆಯಾಗಿ ಹರಿಯುತಲಿ ಊರೊಳಗೆ,**
**ಅಪ್ಪ ಮಾಚಣ್ಣನು ಜನಿಸಿದನು."**

ಅದೇ ನೆಲದಲ್ಲಿ ನಿಂತು ಈ ಸಾಲುಗಳನ್ನು ನೆನಪಿಸಿಕೊಂಡಾಗ ಅವು ಕೇವಲ ಹಾಡಾಗಿ ಉಳಿಯಲಿಲ್ಲ. ಅವು ಗಾಳಿಯಲ್ಲಿ ಬೆರೆತ ಇತಿಹಾಸವಾಗಿ, ಮಣ್ಣಿನ ಪರಿಮಳವಾಗಿ, ಮನಸ್ಸಿನ ಭಾವವಾಗಿ ನನ್ನೊಳಗೆ ಇಳಿದವು. ದೇವರ ಹಿಪ್ಪರಗಿ ಈ ಹೆಸರು ಕೇಳಿದ ತಕ್ಷಣ ನೆನಪಾಗುವವರು ಶರಣ ಮಡಿವಾಳ ಮಾಚಿದೇವರು. ಕ್ರಿ.ಶ. ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಮಹಾನ್ ಸಾಮಾಜಿಕ ಮತ್ತು ಆಧ್ಯಾತ್ಮಿಕ ಚಳವಳಿಯ ಪ್ರಮುಖ ಶಿವಶರಣರಲ್ಲಿ ಅವರು ಒಬ್ಬರು. ಅವರ ಜೀವನದ ಮಹತ್ವ ಅವರು ಮಾಡಿದ ವೃತ್ತಿಯಲ್ಲಿ ಇರಲಿಲ್ಲ; ಆ ವೃತ್ತಿಗೆ ನೀಡಿದ ಗೌರವದಲ್ಲಿ ಇತ್ತು. ಅವರು ಶಿವಶರಣರ ಬಟ್ಟೆಗಳನ್ನು ತೊಳೆಯುತ್ತಿದ್ದರು. ಆದ–'ರೆ ಅದು ಕೇವಲ ಬಟ್ಟೆಗಳನ್ನು ಶುಚಿಗೊಳಿಸುವ ಕೆಲಸವಾಗಿರಲಿಲ್ಲ. ಅದು ಕಾಯಕವನ್ನು ಪೂಜೆಯನ್ನಾಗಿಸಿದ ಸಾಧನೆ. ಅದು ಬೆವ–ರಿನ ಹನಿಯನ್ನು ಭಕ್ತಿಯ ತೀರ್ಥವನ್ನಾಗಿಸಿದ ಜೀವನ. ಅದು ಶ್ರಮವನ್ನೇ ಶಿವಾರಾಧನೆಯ ಮಟ್ಟಕ್ಕೆ ಏರಿಸಿದ ಮಹಾನ್







ತತ್ತ್ವ. ಬಸವಣ್ಣನವರು "ಕಾಯಕವೇ ಕೈಲಾಸ" ಎಂದು ಹೇಳಿದ ತತ್ತ್ವವನ್ನು ಮಡಿವಾಳ ಮಾಚಿದೇವರು ತಮ್ಮ ಬದುಕಿನ ಮೂಲಕ ಸಾಬೀತುಪಡಿಸಿದರು. ಕೈಯಲ್ಲಿ ಕೆಲಸ, ಹೃದಯದಲ್ಲಿ ಶಿವ, ಬದುಕಿನಲ್ಲಿ ವಿನಯ ಈ ಮೂರು ಗುಣಗಳೇ ಅವರನ್ನು ಸಾಮಾನ್ಯ ಮನುಷ್ಯರಿಂದ ಮಹಾನ್ ಶಿವಶರಣರನ್ನಾಗಿ ರೂಪಿಸಿದವು.

ದೇವಾಲಯದ ಆವರಣದಲ್ಲಿ ನಿಧಾನವಾಗಿ ನಡೆಯುತ್ತಿದ್ದಾಗ ಒಂದು ಶಿಲ್ಪ ನನ್ನ ಗಮನ ಸೆಳೆಯಿತು. ಮಡಿವಾಳ ಮಾಚಿದೇವರು ಬಟ್ಟೆಗಳನ್ನು ತೊಳೆಯುತ್ತಿರುವ ಆ ಶಿಲ್ಪವನ್ನು ನೋಡಿದ ಕ್ಷಣದಲ್ಲಿ ಮನಸ್ಸು ಮೌನವಾಯಿತು. ಕಲ್ಲಿನಲ್ಲೂ ಜೀವವಿರಬಹುದೇ ಎಂಬ ಪ್ರಶ್ನೆ ಮೂಡಿತು.

ಆ ಶಿಲ್ಪದಲ್ಲಿ ಕಂಡದ್ದು ಕೇವಲ ಒಬ್ಬ ವ್ಯಕ್ತಿಯ ರೂಪವಲ್ಲ; ಕೆಲಸದ ಮೇಲಿನ ನಿಷ್ಠೆ, ಭಕ್ತಿಯ ಮೇಲಿನ ಪ್ರೀತಿ ಮತ್ತು ಮಾನವೀಯತೆಯ ಮೇಲಿನ ಅಪಾರ ವಿಶ್ವಾಸ. ಅಷ್ಟರಲ್ಲಿ ನನ್ನೊಳಗೆ ಒಂದು ಪ್ರಶ್ನೆ ಎದ್ದಿತು, ಇಂದು ಮಡಿವಾಳ ಮಾಚಿದೇವರು ನಮ್ಮ ನಡುವೆ ಬಂದರೆ ನಾವು ಅವರನ್ನು ಹೇಗೆ ನೋಡುವೆವು? ಅವರ ವೃತ್ತಿಯನ್ನು ನೋಡಿ ತೀರ್ಪು ಕೊಡುತ್ತೇವೆಯೇ? ಅಥವಾ ಅವರ ಮೌಲ್ಯಗಳನ್ನು ನೋಡಿ ಗೌರವಿಸುತ್ತೇವೆಯೇ?

ಈ ಪ್ರಶ್ನೆ ನನ್ನನ್ನು ಬಹಳ ಹೊತ್ತು ಕಾಡಿತು. ಇಂದು ನಾವು ಯಶಸ್ಸಿನ ಬಗ್ಗೆ ಹೆಚ್ಚು ಮಾತನಾಡುತ್ತೇವೆ; ಆದರೆ ಶ್ರಮದ ಬಗ್ಗೆ ಕಡಿಮೆ ಮಾತನಾಡುತ್ತೇವೆ. ಹುದ್ದೆಗಳಿಗೆ ಗೌರವ ಕೊಡುತ್ತೇವೆ; ಆದರೆ ಕೆಲಸ ಮಾಡುವ ಕೈಗಳಿಗೆ ಎಷ್ಟು ಗೌರವ ಕೊಡುತ್ತೇವೆ? ಹಣ ಗಳಿಸುವುದನ್ನು ಕಲಿಸುತ್ತೇವೆ; ಆದರೆ ಪ್ರಾಮಾಣಿಕವಾಗಿ ದುಡಿಯುವುದನ್ನು ಕಲಿಸುತ್ತೇವೆಯೇ? ಈ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಾದರೆ ಶರಣ–ರ ಬದುಕಿನ ಕಡೆಗೆ ಮರಳಲೇಬೇಕು. ಮಡಿವಾಳ ಮಾಚಿದೇವರ ಸ್ಮಾರಕದ ಆವರಣದಲ್ಲಿ ನಿಂತಾಗ ನನಗೆ ಶಿಕ್ಷಕನಾಗಿ ಮತ್ತೊಂದು ಸತ್ಯ ಅರಿವಾಯಿತು.

**ಶಿಕ್ಷಣವೆಂದರೆ ಕೇವಲ ಪಠ್ಯಪುಸ್ತಕಗಳಲ್ಲ.**
**ಶಿಕ್ಷಣವೆಂದರೆ ಕೇವಲ ಪರೀಕ್ಷೆಗಳಲ್ಲ.**
**ಶಿಕ್ಷಣವೆಂದರೆ ಕೇವಲ ಅಂಕಗಳಲ್ಲ.**
**ಶಿಕ್ಷಣವೆಂದರೆ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಕ್ರಿಯೆ.**

ಒಬ್ಬ ಶಿಕ್ಷಕ ವಿದ್ಯಾರ್ಥಿಗಳಿಗೆ ಇತಿಹಾಸವನ್ನು ಹೇಳಬಹುದು. ಆದರೆ ಇತಿಹಾಸದ ನೆಲದ ಮೇಲೆ ನಿಲ್ಲಿಸಿ ಅದರ ಸ್ಪಂದನವನ್ನು ಅನುಭವಿಸುವಂತೆ ಮಾಡಿದಾಗ ಮಾತ್ರ ಶಿಕ್ಷಣ ಜೀವಂತವಾಗುತ್ತದೆ. ಅದಕ್ಕಾಗಿಯೇ ದೇವರ ಹಿಪ್ಪರಗಿಯ ಈ ಭೇಟಿ ನನಗೆ ಕೇವಲ ದರ್ಶನವಾಗಿರಲಿಲ್ಲ. ಅದು ಒಂದು ಪಾಠವಾಗಿತ್ತು. ಒಂದು ಆತ್ಮಚಿಂತನೆಯಾಗಿತ್ತು. ಒಂದು ಮೌಲ್ಯಶಿಕ್ಷಣವಾಗಿತ್ತು.

ದೇವಾಲಯದ ಪಕ್ಕದಲ್ಲಿರುವ ಕಲ್ಮೇಶ್ವರ ದೇವಾಲಯದ ಪ್ರಾಚೀನ ಶಿಲ್ಪಕಲೆಯನ್ನು ನೋಡಿದಾಗ ಕನ್ನಡ ನಾಡಿನ ಸಾಂಸ್ಕೃತಿಕ ಶ್ರೀಮಂತಿ–ಕೆಯ ಬಗ್ಗೆ ಮತ್ತಷ್ಟು ಹೆಮ್ಮೆ ಮೂಡಿತು. ಇಂತಹ ಪುಣ್ಯಭೂಮಿಗಳು ನಮ್ಮ ಇತಿಹಾಸದ ಜೀವಂತ ಗ್ರಂಥಗಳು. ಅವುಗಳನ್ನು ಕೇವಲ ನೋಡದೆ, ಅರ್ಥಮಾಡಿಕೊಳ್ಳಬೇಕು; ಕೇವಲ ಆರಾಧಿಸದೆ, ಅವುಗಳ ಸಂದೇಶವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ದೇವರ ಹಿಪ್ಪರಗಿಯಿಂದ ಹಿಂದಿರುಗುವಾಗ ನನ್ನ ಮೊಬೈಲ್‌ನಲ್ಲಿ ಕೆಲವೇ ಚಿತ್ರಗಳಿದ್ದವು. ಆದರೆ ನನ್ನ ಮನಸ್ಸಿನಲ್ಲಿ ನೂರಾರು ಚಿಂತನೆಗಳಿದ್ದವು. ಗದ್ದುಗೆಯ ಮುಂದೆ ಬಾಗಿದ ನನ್ನ ತಲೆ ಇನ್ನೂ ನೆನಪಿದೆ. ಆ ತಲೆ ಕಲ್ಲಿನ ಮುಂದೆ ಬಾಗಿರಲಿಲ್ಲ.

ಕಾಯಕವನ್ನು ಕೈಲಾಸವನ್ನಾಗಿಸಿದ ಮಹಾನ್ ಜೀವನದ ಮುಂದೆ ಬಾಗಿತ್ತು. ಇಂದು ಸಮಾಜಕ್ಕೆ ಮಡಿವಾಳ ಮಾಚಿದೇವರ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚು ಇದೆ.


ಏಕೆಂದರೆ ಅಭಿವೃದ್ಧಿಯ ಓಟದಲ್ಲಿ ನಾವು ಮೌಲ್ಯಗಳನ್ನು ಹಿಂದೆ ಬಿಟ್ಟಿದ್ದೇವೆ.

ಸೌಲಭ್ಯಗಳ ನಡುವೆ ಬದುಕುತ್ತಿದ್ದರೂ ನೆಮ್ಮದಿಯನ್ನು ಕಳೆದುಕೊಂಡಿದ್ದೇವೆ.

ಜ್ಞಾನವನ್ನು ಗಳಿಸಿದ್ದೇವೆ; ಆದರೆ ವಿನಯವನ್ನು ಕಳೆದುಕೊಳ್ಳುತ್ತಿದ್ದೇವೆ.

ಅಂತಹ ಸಂದರ್ಭದಲ್ಲಿ ಶರಣರ ಬದುಕು ನಮ್ಮನ್ನು ಮತ್ತೆ ಮನುಷ್ಯರಾಗುವ ದಾರಿಯತ್ತ ಕರೆದೊಯ್ಯುತ್ತದೆ.

ದೇವರ ಹಿಪ್ಪರಗಿ ಕೇವಲ ಒಂದು ಪಟ್ಟಣವಲ್ಲ. ಅದು ಬಸವ ತತ್ವದ ಪರಿಮಳ ಇನ್ನೂ ಉಳಿದಿರುವ ಪುಣ್ಯಭೂಮಿ. ಅದು ಕಾಯಕದ




ಗೌರವ ಇನ್ನೂ ಜೀವಂತವಾಗಿರುವ ನೆಲ. ಅದು ಶರಣ ಮಡಿವಾಳ ಮಾಚಿದೇವರ ಸ್ಮರಣೆ ಮಾತ್ರವಲ್ಲ; ಮಾನವೀಯತೆಯ ಶಾಶ್ವತ ಪಾಠಶಾಲೆ. ದೇವರ ಹಿಪ್ಪರಗಿಯಿಂದ ಹಿಂದಿರುಗಿದ ನಂತರವೂ ನನ್ನ ಮನಸ್ಸು ಆಗಾಗ ಆ ಸ್ಮಾರಕದತ್ತ ಹಾರುತ್ತದೆ. ಅಲ್ಲಿನ ಮೌನ, ಅಲ್ಲಿನ ಗಾಳಿ, ಅಲ್ಲಿನ ಗೋಪುರ, ಅಲ್ಲಿನ ಗದ್ದುಗೆ ಇವೆಲ್ಲವೂ ಒಂದೇ ಮಾತನ್ನು ಮತ್ತೆ ಮತ್ತೆ ಹೇಳುತ್ತವೆ "ಕಾಯಕವನ್ನು ಪ್ರೀತಿಸು.. ಮನುಷ್ಯನನ್ನು ಗೌರವಿಸು.. ಬೆವರನ್ನು ಪವಿತ್ರವೆಂದು ಕಾಣು.. ಆಗಲೇ ಜೀವನ ಕೈಲಾಸವಾಗುತ್ತದೆ." ಶರಣ ಮಡಿವಾಳ ಮಾಚಿದೇವರ ಸ್ಮಾರಕಕ್ಕೆ ನನ್ನ ಈ ಭೇಟಿ ಒಂದು ದಿನದ ಪ್ರವಾಸವಾಗಿರಲಿಲ್ಲ. ಅದು ನನ್ನ ಶಿಕ್ಷಕ ಜೀವನಕ್ಕೆ ಹೊಸ ದೃಷ್ಟಿಕೋನ ನೀಡಿದ ಪಯಣ. ನನ್ನ ಲೇಖಕನ ಮನಸ್ಸಿಗೆ ಹೊಸ ಚಿಂತನೆ ನೀಡಿದ ಅನುಭವ. ನನ್ನ ಕನ್ನಡತನಕ್ಕೆ ಹೊಸ ಹೆಮ್ಮೆ ನೀಡಿದ ಕ್ಷಣ. ಆದ್ದರಿಂದ ದೇವರ ಹಿಪ್ಪರಗಿಗೆ ನಾನು ವಿದಾಯ ಹೇಳಿದ್ದು ಕಾಲಿನಿಂದ ಮಾತ್ರ. ಮನಸ್ಸು ಮಾತ್ರ ಇಂದಿಗೂ ಅಲ್ಲಿಯೇ ಉಳಿದಿದೆ..

ಲೇಖನ
■ ಪ್ರಶಾಂತ ಚಿದಂಬರ ಕುಲಕರ್ಣಿ.
ಗಣಿತ ಉಪನ್ಯಾಸಕರು
ಸಿಂದಗಿ
ವಿಜಯಪುರ ಜಿಲ್ಲೆ



# ಭಾರತ್ ಜೋಡೋ ಯುವ ಸಂಘ ಸ್ಥಾಪನೆಗೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ವಿಕಾಸಶೀಲ ಹಾಗೂ ಸೌಹಾರ್ದಶೀಲ ಕರ್ನಾಟಕ ನಿರ್ಮಾಣದ ಉದ್ದೇಶದಿಂದ ಸಮುದಾಯ ಅಭಿವೃದ್ಧಿ, ಕ್ರೀಡೆ, ಫಿಟ್ನೆಸ್, ಸಾಂಸ್ಕೃತಿಕ ಚಟುವಟಿಕೆ, ಸಾಮಾಜಿಕ ಸಾಮರಸ್ಯ ಹಾಗೂ ನಾಯಕತ್ವದ ಗುಣಗಳನ್ನು ಉತ್ತೇಜಿಸಲು ಕರ್ನಾಟಕ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಭಾರತ್ ಜೋಡೋ ಯುವ ಸಂಘ ಯೋಜನೆಯನ್ನು ಜಾ-ರಿಗೆ ತರಲಾಗಿದೆ. ಈ ಯೋಜನೆಯಡಿ ಸಿಂದಗಿ ನಗರಸಭೆ ವ್ಯಾಪ್ತಿಯಲ್ಲಿ ಅರ್ಹ ಯುವ ಸಂಘಗಳನ್ನು ರಚಿಸಲು ನಿಗದಿಪಡಿಸಿರುವ ಮಾರ್ಗಸೂಚಿಯಂತೆ ಅರ್ಹ ಯುವಕ-ಯುವತಿಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಪೌರಾಯುಕ್ತ ರವಿ ಶಿರಗುಪ್ಪಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆ, 16 ರಿಂದ 35 ವರ್ಷದೊಳಗಿನ ಯುವಕ-ಯುವತಿಯರು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಕಡ್ಡಾಯವಾಗಿ ಸಿಂದಗಿ ನಗರಸಭೆಯ ಸಂಬಂಧಪಟ್ಟ ವಾರ್ಡ್ ಅಥವಾ ಪ್ರದೇಶದ ಖಾಯಂ ನಿವಾಸಿಯಾಗಿರಬೇಕು. ಪ್ರತಿಯೊಬ್ಬ ಸದಸ್ಯರ ನೋಂದಣಿಗೆ ಆಧಾರ್ ಕಾರ್ಡ್ ಕಡ್ಡಾಯ. ಪ್ರತಿ ಸದಸ್ಯರಿಗೆ ಗುರುತಿನ ಚೀಟಿ ಸೇರಿದಂತೆ ರೂ.10 ಶುಲ್ಕ ನಿಗದಿಪಡಿಸಲಾಗಿದೆ. ಅರ್ಜಿ ಸಲ್ಲಿಸುವ ವಿಧಾನ, ಅರ್ಹ ಯುವಕ-ಯುವತಿಯರು ಅಧಿಕೃತ ಬಿಜೆವಾಯ್ಎಸ್ ಪೋರ್ಟಲ್ ಅಥವಾ ಬಿಜೆವಾಯ್ಎಸ್ ಮೊಬೈಲ್ ಆಪ್ ಮೂಲಕ ಅರ್ಜಿ ಸಲ್ಲಿಸಬಹುದು. ಅಲ್ಲದೆ, ಹತ್ತಿರದ ಕರ್ನಾಟಕ ಒನ್, ಗ್ರಾಮ ಒನ್ ಅಥವಾ ಸಿಎಸ್ಸಿ ಕೇಂದ್ರಗಳ ಮೂಲಕವೂ ಅರ್ಜಿ ಸಲ್ಲಿಸಲು ಅವಕಾಶವಿದೆ. ಯುವಜನರು ಯೋಜನೆಯ ಸದುಪಯೋಗ ಪಡೆದುಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ. ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಸಾರ್ವಜನಿಕರು ಕಚೇರಿ ವೇಳೆಯಲ್ಲಿ ಸಿಂದಗಿ ನಗರಸಭೆ ಕಚೇ-ರಿಯನ್ನು ಸಂಪರ್ಕಿಸುವಂತೆ ನಗರಸಭೆ ಪೌರಾಯುಕ್ತ ತಿಳಿಸಿದ್ದಾರೆ.

# ಚಿದಾನಂದ ಸವದಿ ನೇತೃತ್ವ: ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

■ ಉದಯರಶ್ಮಿ ದಿನಪತ್ರಿಕೆ

ಅಥಣಿ: 2025-26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಹಾಗೂ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನದಡಿ ಅಥಣಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಒಟ್ಟು 1.45 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಯುವ ನಾಯಕ ಚಿದಾನಂದ ಸವದಿ ಅವರು ಗ್ರಾಮಸ್ಥರ ನೇತೃತ್ವದಲ್ಲಿ ಭೂಮಿಪೂಜೆ ನೆರವೇರಿಸಿದರು.

ಶೇಗುಣಸಿ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿಗೆ 20 ಲಕ್ಷ, ಖವಟಕೊಪ್ಪ ಗ್ರಾಮದಲ್ಲಿ ರಸ್ತೆ ನಿರ್ಮಾಣಕ್ಕೆ 50 ಲಕ್ಷ, ಜೈನ ಸಮುದಾಯ ಭವನ ನಿರ್ಮಾಣಕ್ಕೆ 20 ಲಕ್ಷ, ಕರ್ಲಟ್ಟಿ ಗ್ರಾಮದಲ್ಲಿ ರಸ್ತೆ ನಿರ್ಮಾಣಕ್ಕೆ 20 ಲಕ್ಷ, ಅಡಹಳ್ಳಿ ಗ್ರಾಮದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ 20 ಲಕ್ಷ, ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ಸಮುದಾಯ ಭವನ ನಿರ್ಮಾಣ-ಕ್ಕೆ 10 ಲಕ್ಷ ಹಾಗೂ ಖವಟಕೊಪ್ಪ ಗ್ರಾಮದಲ್ಲಿ ಬಸ್ ತಂಗುದಾಣ ನಿರ್ಮಾಣಕ್ಕೆ 5 ಲಕ್ಷ ಸೇರಿದಂತೆ ಒಟ್ಟು 1.45 ಕೋಟಿ ಅನುದಾನದಲ್ಲಿ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಚಿದಾನಂದ ಸವದಿ ಅವರು, "ಈ ಅಭಿವೃದ್ಧಿ ಕಾಮಗಾರಿಗಳ ಭೂಮಿಪೂಜೆ ಕಾರ್ಯಕ್ರಮಕ್ಕೆ ನಮ್ಮ ತಂದೆ ಸಹಕಾರ ಸಚಿವರಾದ ಲಕ್ಷ್ಮಣ ಸವದಿ ಅವರು ಆಗಮಿಸಬೇಕಿತ್ತು. ಆದರೆ ನಿಮ್ಮೆಲ್ಲರ ಆಶೀರ್ವಾದದಿಂದ ಅವರು ಇದೀಗ ಸಹಕಾರಿ ಸಚಿವರಾಗಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಉಸ್ತುವಾರಿಯಾಗಿ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಹೀಗಾಗಿ ರಾಜ್ಯಾದ್ಯಂತ ಪ್ರವಾಸ ಮಾಡಿ ರೈತರ ಹಾಗೂ ಜನರ ಸಮಸ್ಯೆಗಳನ್ನು ಆಲಿಸುವ ಜವಾಬ್ದಾರಿ ಅವರ ಮೇಲಿದೆ" ಎಂದರು.

"ನಮ್ಮ ತಂದೆಯವರಾಗಲಿ ನಾನಾಗಲಿ ಯಾವಾಗಲೂ ನಿಮ್ಮೊಂದಿಗೆ ಇರುತ್ತೇವೆ. ಯಾವುದೇ ಸಮಸ್ಯೆ ಅಥವಾ ಕಷ್ಟ ಎದುರಾದರೂ ನನ್ನ ಗಮನಕ್ಕೆ ತಂದರೆ ಅದನ್ನು ಅವರ ಗಮನಕ್ಕೆ ತಂದು ಪರಿಹಾರಕ್ಕಾಗಿ ಪ್ರಯತ್ನಿಸುತ್ತೇನೆ. ಸಹಕಾರಿ ಸಚಿವರಾಗಿ ನಿಮ್ಮೆಲ್ಲರ ನೆಚ್ಚಿನ ನಾಯಕ ಲಕ್ಷ್ಮಣ ಸವದಿ ಅವರು ರೈತರ ಮುಖದಲ್ಲಿ ಮಂದಹಾಸ ಮೂಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಸಹಕಾರ ಇಲಾಖೆಯ ಮೂಲಕ ರೈತರು, ಬಡವರು ಹಾಗೂ ಸಮಾಜದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಿದ್ದಾರೆ" ಎಂದು ಹೇಳಿದರು.

"ಅಥಣಿ ತಾಲೂಕಿನ ಸಮಗ್ರ ಅಭಿವೃದ್ಧಿಯೇ ನಮ್ಮ ಗುರಿಯಾಗಿದೆ. ನಾನು ಮತ್ತು ನಮ್ಮ ಸವದಿ ಕುಟುಂಬ ಸದಾ ನಿಮ್ಮೊಂದಿಗೆ ಇರುತ್ತೇವೆ. ತಮ್ಮೆಲ್ಲರ ಆಶೀರ್ವಾದ ಮತ್ತು ಸಹಕಾರ ಮುಂದೆಯೂ ಇದೇ ರೀತಿ ಇರಲಿ" ಎಂದು ಚಿದಾನಂದ ಸವದಿ ಮನವಿ ಮಾಡಿದರು.

ಈ ವೇಳೆ ವಿವಿಧ ಗ್ರಾಮದ ಹಿರಿಯರು ಮಾಜಿ ಗ್ರಾಮ ಪಂಚಾಯತ್ ಸದಸ್ಯರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಉಪ ನೋಂದಣಾಧಿಕಾರಿಗಳ ಕಚೇರಿಗೆ ಡಿಸಿ ದಿಢೀರ್ ಭೇಟಿ




■ ಉದಯರಶ್ಮಿ ದಿನಪತ್ರಿಕೆ

**ಸಾರ್ವಜನಿಕ ಸೇವೆ, ಶುಚಿತ್ವಕ್ಕೆ ಆದ್ಯತೆ ನೀಡಲು ಜಿಲ್ಲಾಧಿಕಾರಿ ಡಾ. ಕೆ. ಆನಂದ ಸೂಚನೆ**

ವಿಜಯಪುರ: ನಗರದ ಸೊಲ್ಲಾಪುರ ರಸ್ತೆಯಲ್ಲಿರುವ ಉಪ ನೋಂದಣಾಧಿಕಾರಿಗಳ ಕಚೇರಿಗೆ ಗುರುವಾರ ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ದಿಢೀರ್ ಭೇಟಿ ನೀಡಿ, ಕಚೇ-ರಿಯ ದೈನಂದಿನ ಆಡಳಿತ ಕಾರ್ಯವೈಖರಿ ಹಾಗೂ ಹಾಲಿ ವ್ಯವಸ್ಥೆಗಳ ಕುರಿತು ಸಮಗ್ರವಾಗಿ ಪರಿಶೀಲನೆ ನಡೆಸಿದರು.

ಕಚೇರಿ ಭೇಟಿಯ ವೇಳೆ ಕಚೇರಿಯ ಪರಿಸರ ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಇಡೀ ಕಚೇ-ರಿಯ ಆವರಣದಲ್ಲಿ ಸಂಪೂರ್ಣ ಶುಚಿತ್ವ, ಶಿಸ್ತು ಹಾಗೂ ಚೊಕ್ಕಟವಾಗಿರುವಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗೆ ಚುರುಕು ಮುಟ್ಟಿಸುವ ಮೂಲಕ ಕಟ್ಟು-ನಿಟ್ಟಿನ ಸೂಚನೆ ನೀಡಿದರು. ಕಚೇರಿಗೆ ಆಗಮಿಸುವ ಸಾರ್ವಜನಿಕರ ಹಿತಾಸಕ್ತಿಗೆ ಮೊದಲ ಆದ್ಯತೆ ನೀಡಬೇಕು ಎಂದು ಸಲಹೆ ಮಾಡಿದರು.

ಮೂಲಸೌಲಭ್ಯಕ್ಕೆ ಸೂಚನೆ: ಕಚೇ-ರಿಗೆ ಆಗಮಿಸುವ ಜನರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಸೂಕ್ತ ಆಸನ ವ್ಯವಸ್ಥೆ, ಕುಡಿಯುವ ನೀರು ಹಾಗೂ ಶೌಚಾಲಯ ಸೌಲಭ್ಯಗಳನ್ನು ಸಮರ್ಪಕವಾಗಿ ವ್ಯವಸ್ಥೆ ಮಾಡಬೇಕು ಎಂದು ಹೇಳಿದರು.

ತಕ್ಷಣಕ್ಕೆ ಜನರಿಗೆ ಸ್ಪಂದಿಸಿ: ಜೊತೆಗೆ, ವಿವಿಧ ಕೆಲಸ-ಕಾರ್ಯಗಳಿಗಾಗಿ ಬರುವ ಸಾರ್ವಜನಿಕರ ಅರ್ಜಿಗಳಿಗೆ ಕಾಲಮಿತಿ ಹಾಕಿಕೊಂಡು ಕೆಲಸ ಮಾಡಿಕೊಡಬೇಕು. ಜೊತೆಗೆ ಸಾರ್ವಜನಿಕರ ಕೆಲಸ-ಕಾರ್ಯಗಳಿಗೆ ತಕ್ಷಣವೇ ಸ್ಪಂದಿಸಿ ತ್ವರಿತ ಸೇವೆಯನ್ನು ತಲುಪಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಈ ದಿಢೀರ್ ಭೇಟಿ ಸಂದರ್ಭದಲ್ಲಿ ಕಚೇ-ರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತ-ರಿದ್ದು, ಕಚೇರಿಯ ಪ್ರಸ್ತುತ ಸ್ಥಿತಿಗತಿ ಹಾಗೂ ಕಾರ್ಯನಿರ್ವಹಣೆಯ ಕುರಿತು ಜಿಲ್ಲಾಧಿಕಾರಿಗಳಿಗೆ ಸಂಪೂರ್ಣ ಮಾಹಿತಿ ನೀಡಿದರು.

# ಕಳ್ಳತನ, ಸುಳ್ಳು, ಕೆಟ್ಟ ಅಭ್ಯಾಸದಿಂದ ದೂರವಿರಬೇಕು

## ಸರ್ಕಾರಿ ಶಾಲಾ ಮಕ್ಕಳಿಗೆ ಕಾನೂನು ಅರಿವು ಸಂವಾದ ।ವಿಜಯಪುರ ಗ್ರಾಮೀಣ ವೃತ್ತ ಸಿಪಿಐ ಅವಜಿ ಸಲಹೆ

■ ಉದಯರಶ್ಮಿ ದಿನಪತ್ರಿಕೆ



ತಿಕೋಟಾ: ಚಿಕ್ಕ ವಯಸ್ಸಿನಲ್ಲೇ ಕಳ್ಳತನ, ಸುಳ್ಳು ಹೇಳುವಂತಹ ಕೆಟ್ಟ ಅಭ್ಯಾಸಗಳಿಂದ ದೂರವಿರಬೇಕು. ಶಿಸ್ತಿನಿಂದ ಇದ್ದು ಉತ್ತಮ ಶಿಕ್ಷಣ ಪಡೆಯಬೇಕು ಎಂದು ವಿಜಯಪುರ ಗ್ರಾಮೀಣ ವೃತ್ತ ಸಿಪಿಐ ರಮೇಶ ಅವಜಿ ಹೇಳಿದರು.

ತಾಲ್ಲೂಕಿನ ಟಕ್ಕಳಕಿಯ ರಾವಜಿವಸ್ತಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ನಡೆದ ಮಕ್ಕಳಲ್ಲಿ ಕಾನೂನು ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಚಿಕ್ಕ ವಯಸ್ಸಿನಿಂದಲೇ ಮಕ್ಕಳಿಗೆ ಒಳ್ಳೆಯದು, ಕೆಟ್ಟದ್ದು, ಸರಿ ತಪ್ಪುಗಳ ಬಗ್ಗೆ ತಿಳುವಳಿಕೆ ಇರಬೇಕು. ಪೊಲೀಸರು ಕೂಡ ಸ್ನೇಹಿತರು, ಅವರನ್ನು ನೋಡಿ ಹೆದರಬಾರದು. ಯಾವುದೇ ತೊಂದರೆ ಇದ್ದರೆ ಧೈರ್ಯವಾಗಿ ಹೇಳಬೇಕು. ಯಾರಾದರೂ ಅನುಮಾನಾಸ್ಪದವಾಗಿ ಮುಟ್ಟಿದರೆ ಅಥ-ವಾ ಮಾತನಾಡಿದರೆ ಕೂಡಲೇ ಮನೆಯವರಿಗೆ ಅಥ-ವಾ ಶಿಕ್ಷಕರಿಗೆ ಹೇಳಬೇಕು. ರಸ್ತೆ ದಾಟುವಾಗ ಎಡ ಬಲ ನೋಡಬೇಕು. ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸಬೇಕು. ಅಪ-ರಿಚಿತರಿಂದ ಬರುವ ಮೆಸೇಜ್, ಯೂಟ್ಯೂಬ್, ಮೊಬೈಲ್ ಗೇಮ್‌ಗಳಲ್ಲಿ ಯಾರಿಗೂ ತಮ್ಮ ಹೆಸರು, ಮನೆ ವಿಳಾಸ ಕಳಿಸಬಾರದು. ತುರ್ತು ಸಂದರ್ಭದಲ್ಲಿ 112 ಗೆ ಕರೆ ಮಾಡಬಹುದು. ಮಕ್ಕಳ ಸಹಾಯವಾಣಿ 1098 ಬಗ್ಗೆ ಮಾಹಿತಿ ನೀಡಿದರು.

ಮಕ್ಕಳ ಜೊತೆ ಪ್ರಶ್ನೋತ್ತರ ನಡೆಸಿ, ಅವರ ಅನುಮಾನಗಳನ್ನು ನಿವಾರಿಸಿದರು. ಪೊಲೀಸ್ ಅಂದರೆ ಏನು ಮಾಡುತ್ತಾರೆ. ದೊಡ್ಡವರಾದ ಮೇಲೆ ಪೊಲೀಸ್ ಆಗುವುದು ಹೇಗೆ? ಎಂಬ ಮಕ್ಕಳ ಪ್ರಶ್ನೆಗಳಿಗೆ ಸರಳವಾಗಿ ಉತ್ತರಿಸಿ ಮಕ್ಕಳನ್ನು ಪ್ರೋತ್ಸಾಹಿಸಿದರು.

ಮುಖ್ಯೋಪಾಧ್ಯಾಯರು ಮಾಂತೇಶ ರಾಥೋಡ್ ಮಾತನಾಡಿ, ಪೊಲೀಸ್ ಇಲಾಖೆಯಲ್ಲಿ ಅವಜಿಯವರು ಮಾಡಿದ ಸಾಧನೆಗಳ ಬಗ್ಗೆ ಮಕ್ಕಳಿಗೆ ತಿಳಿಸಿದರು ಮತ್ತು ಮಕ್ಕಳಿಗೆ ಕಾನೂನಿನ ಬಗ್ಗೆ ಅರಿವು ಮೂಡಿಸಿದ ಪೊಲೀಸ್ ಇಲಾಖೆಗೆ ಧನ್ಯವಾದಗಳು ತಿಳಿಸಿದರು.

ಶಿಕ್ಷಕ ರಾಜೇಶ ಪಾಟೀಲ, ಪೇದೆ ಮಲ್ಲು ಕಣಮುಚನಾಳ, ಶಾಲಾ ಮಕ್ಕಳು ಇದ್ದರು.

# ಶೀತಲಗೃಹಕ್ಕೆ ಜಿಲ್ಲಾಧಿಕಾರಿ ಡಾ.ಆನಂದ್ ಭೇಟಿ, ಪರಿಶೀಲನೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ತಿಕೋಟಾ ತಾಲ್ಲೂಕಿನ ತೊರವಿ ಗ್ರಾಮ ಬಳಿ ಕರ್ನಾಟಕ ದ್ರಾಕ್ಷಿ ಮತ್ತು ವೈನ್ ಮಂಡಳಿಯಿಂದ ನಿರ್ಮಾಣವಾಗುತ್ತಿರುವ ಶೀತಲಗೃಹಕ್ಕೆ ಜಿಲ್ಲಾಧಿಕಾ-ರಿಗಳಾದ ಡಾ. ಆನಂದ ಕೆ. ಅವರು ಭೇಟಿ ನೀಡಿ ಪರಿಶೀಲಿಸಿದರು.

ಈ ದ್ರಾಕ್ಷಿ ಮತ್ತು ವೈನ್ ಬೋರ್ಡ್ ಒಟ್ಟು ವಿಸ್ತೀರ್ಣ 141 ಎ.ಗುಂಟ ಇದೆ. ಸುತ್ತಲೂ ತಂತಿ ಬೇಲಿ ಅಳವಡಿಸಲಾಗಿದೆ. ರಸ್ತೆಗಳ ನಿರ್ಮಾಣ ಹಾಗೂ 10 ಬೋರವೆಲ್ ಗಳಿದ್ದು, ಪ್ರಸ್ತುತ ನಬಾರ್ಡ ಯೋಜನೆಯಡಿ ಸುಮಾರು 10000 ಮೆಟ್ರಿಕ್ ಟನ್ ಸಾಮರ್ಥ್ಯದ ಶೀತಲ ಗೃಹ ನಿರ್ಮಾಣಗೊಳ್ಳುತ್ತಿದ್ದು, ವೈನ್ ಮತ್ತು ದ್ರಾಕ್ಷಿ ಬೋರ್ಡದ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದಂತೆ 2 ರಿಂದ 3 ತಿಂಗಳಲ್ಲಿ ನಿರ್ಮಾಣ ಕಾರ್ಯ ಮುಕ್ತಾಯವಾಗಲಿದೆ ಎಂದು ತೋಟಗಾರಿಕೆ ಜಂಟಿ ನಿರ್ದೇಶಕ ಸಿದ್ದರಾಮಯ್ಯ ಬರಗಿಮಠ ಅವರು, ಶೀತಲ ಗೃಹದ ಕುರಿತು ಜಿಲ್ಲಾಧಿಕಾ-ರಿಗಳಿಗೆ ಸಮಗ್ರ ಮಾಹಿತಿ ನೀಡಿದರು.

ಬಳಿಕ ಜಿಲ್ಲಾಧಿಕಾರಿಗಳು ಶೀತಲ ಗೃಹದ ಬಳಕೆ ಹಾಗೂ ನಿರ್ವಹಣೆ ಬಗ್ಗೆ ಚರ್ಚಿಸಿದರು. ಬಳಿಕ ಇದಕ್ಕೆ ಸಂಬಂಧಿಸಿದಂತೆ ಬೋರ್ಡಿನ ವ್ಯವಸ್ಥಾಪಕರ ನಿರ್ದೇಶಕರು ಮುಂದಿನ ದಿನಗಳಲ್ಲಿ ಬಂದು ಮಾಹಿತಿ ನೀಡುವಂತೆ ಸೂಚಿಸಿದರು.

ನಂತರ ಇಟ್ಟಂಗಿಹಾಳದಲ್ಲಿ ನಿರ್ಮಾಣವಾಗುತ್ತಿರುವ ಆಹಾರ ಸಂಸ್ಕರಣಾ ಘಟಕಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾ-ರಿಗಳಿಗೆ, ಕೃಷಿ ಇಲಾಖೆ ಜಂಟಿ ನಿರ್ದೇಶಕರು ಮಾಹಿತಿ ನೀಡಿದರು.

ರಾಜ್ಯದಲ್ಲಿ ಬೇರೆ ಬೇರೆ ಜಿಲ್ಲೆಯಲ್ಲಿ ನಡೆಯುತ್ತಿರುವ ಘಟಕಕ್ಕೆ ಭೇಟಿ ನೀಡಿ ನಮ್ಮ ಜಿಲ್ಲೆಯಲ್ಲಿ ಬೆಳೆಯುವ ಬೇರೆ ಬೇರೆ ಕೃಷಿ ತೋಟಗಾರಿಕೆ ಬೆಳೆಗಳಿಗೆ ಅನುಗುಣವಾಗಿ ಕೈಗೊಳ್ಳಬಹುದಾದ ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ವರದಿ ಸಲ್ಲಿಸಲು ಜಿಲ್ಲಾಧಿಕಾರಿಗಳು ಸೂಚಿಸಿದರು.

# ಹುಲುಸಾದ ಬೆಳೆ ಬೆಳೆದು ಉತ್ತಮ ಇಳುವರಿ ಪಡೆದುಕೊಳ್ಳಿ

## ವಿಜಯಪುರದಲ್ಲಿ ಜಿಲ್ಲಾಧಿಕಾರಿ ಡಾ.ಆನಂದ ಕೆ. ರೈತರಿಗೆ ಸಲಹೆ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ತೋಟಗಾರಿಕೆ ಬೆಳೆಗಳನ್ನು ಹುಲುಸಾಗಿ ಬೆಳೆಯಲು ವಿಜಯಪುರ ಜಿಲ್ಲೆ ಸೂಕ್ತ ವಾತಾವರಣ ಹೊಂದಿದೆ. ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ಹಲವಾರು ವರ್ಷಗಳಿಂದ ತೋಟಗಾ-ರಿಕೆ ಬೆಳೆಗಳ ಮೇಲೆ ಸಂಶೋಧನೆ ಕೈಗೊಳ್ಳುತ್ತಿದೆ. ರೈತರು ಈ ಕಾರ್ಯಾಗಾರದ ಲಾಭ ಪಡೆದುಕೊಂಡು ಹುಲುಸಾದ ಬೆಳೆ, ಬೆಳೆದು ಉತ್ತಮ ಇಳುವರಿ ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಹೇಳಿದರು.

ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ತಿಡಗುಂದಿಯ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ತೋಟಗಾರಿಕೆ ವಿಸ್ತರಣಾ ಶಿಕ್ಷಣ ಕೇಂದ್ರ ಹಾಗೂ ರಾಷ್ಟ್ರೀಯ ತೋಟಗಾ-ರಿಕಾ ಮಂಡಳಿ ಸಹಯೋಗದಲ್ಲಿ ತಿಡಗುಂದಿಯಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ತೋಟಗಾರಿಕಾ ಮಂಡಳಿಯ ಯೋಜನೆಗಳ ಕಾರ್ಯಾಗಾರ ಹಾಗೂ ಪ್ರಮುಖ ಹಣ್ಣಿನ ಬೆಳೆಗಳ ಉತ್ಪಾದನಾ ತಾಂತ್ರಿಕತೆಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ತೋಟಗಾರಿಕಾ ಮಂಡಳಿಯಿಂದ ದೊರೆಯುವ ಸೌಲಭ್ಯ ಪಡೆದುಕೊಂಡು ಬೆಳೆಗಳನ್ನು ಬೆಳೆಯಬೇಕು ಎಂದು ಸಲಹೆ ಮಾಡಿದರು.

ತೋಟಗಾರಿಕೆ ವಿಜ್ಞಾನಗಳ ವಿವಿಯ ವಿಸ್ತರಣಾ ನಿರ್ದೇಶಕ ಡಾ. ವೆಂಕಟೇಶಲು, ತೋಟಗಾರಿಕೆ ಬೆಳೆ ಮತ್ತು ರಾಷ್ಟ್ರೀಯ ತೋಟಗಾರಿಕಾ ಮಂಡಳಿ ಇವರಿಂದ ದೊರೆಯುವ ಸೌಲಭ್ಯಗಳನ್ನು ಪಡೆದುಕೊಂಡು ರೈತರು ತಾಂತ್ರಿಕವಾಗಿ ಬೆಳೆ ಬೆಳೆಯಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಂಡಳಿ ಸದಸ್ಯ ಬಿ. ಎಂ. ಕೊಕರೆ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಸಿದ್ದರಾಮಯ್ಯ ಬರಗಿಮಠ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ, ತೋಟಗಾರಿಕೆ ವಿವಿಯ ಸಹ ಸಂಶೋಧನಾ ಮತ್ತು ವಿಸ್ತರಣಾ ನಿರ್ದೇಶಕ ಡಾ. ವಸಂತ ಗಾಣಿಗೇರ ಭಾಗವಹಿಸಿದ್ದರು.

ತಾಂತ್ರಿಕ ಅಧಿವೇಶನದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಂಡಳಿ ಉಪನಿರ್ದೇಶಕ ಬಿ. ರಾಜು, ಮಂಡಳಿಯಲ್ಲಿ ದೊರೆಯುವ ಸೌಲಭ್ಯಗಳನ್ನು ತಿಳಿಸಿದರೆ, ಸಹಾಯಕ ಪ್ರಾಧ್ಯಾಪಕ ಡಾ. ಸಿದ್ದಣ್ಣ ತೋಟಗಾರಿಕೆ ಬೆಳೆಗಳಲ್ಲಿ ನೂತನ ಬೇಸಾಯ ಕ್ರಮಗಳ ಕುರಿತು ಮಾಹಿತಿ ನೀಡಿದರು. ಸಸ್ಯರೋಗ ಶಾಸ್ತ್ರದ ಸಹಾಯಕ ಪ್ರಾಧ್ಯಾಪಕ ರಮೇಶ ರಾಠೋಡ, ತೋಟಗಾರಿಕೆ ಬೆಳೆಗಳಲ್ಲಿ ಮುಖ್ಯ ರೋಗಗಳು ಹಾಗೂ ಸಂರಕ್ಷಣಾ ಕ್ರಮಗಳ ಕುರಿತು ಮಾಹಿತಿ ನೀಡಿದರೆ, ಸಸ್ಯ ಶರೀರ ಕ್ರಿಯಾಶಾಸ್ತ್ರದ ಸಹ ಪ್ರಾಧ್ಯಾಪಕ ಡಾ. ಸಂಗನಬಸವ ಜಿ. ಗೊಳ್ಳಗಿ ಅವರು, ತೋಟಗಾ-ರಿಕೆ ಬೆಳೆಗಳಲ್ಲಿ ಶಾರೀರಿಕ ನ್ಯೂನ್ಯತೆಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಸುಮಾರು 165 ಜನ ವಿಜಯಪುರ ಜಿಲ್ಲೆಯ ರೈತರು ಭಾಗವಹಿಸಿದ್ದರು. ಕೇಂದ್ರದ ಮುಖ್ಯಸ್ಥ ಡಾ. ಸಂಗನಬಸವ ಜಿ. ಗೊಳ್ಳಗಿ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕ ಡಾ. ಸಿದ್ದಣ್ಣ ತೋಕೆ ನಿರೂಪಿಸಿದರು.

# ಎಎಸ್‌ಡಿಡಿಒ ಅಂಕಿ-ಸಂಖ್ಯೆ ಬಿಡುಗಡೆಗೊಳಿಸಿದ ಡಿಸಿ ಡಾ.ಆನಂದ ಕೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮತದಾರರ ವಿಶೇಷ ಸಮಗ್ರ ಪರಿಷ್ಕರಣೆಗೆ ಸಂಬಂಧಿಸಿದಂತೆ ಜಿಲ್ಲೆಯಾದ್ಯಂತ ಮನೆ-ಮನೆ ಸಮೀಕ್ಷೆ ವೇಳೆ ಗೈರು ಹಾಜರಿ, ಶಾಶ್ವತ ಸ್ಥಳಾಂತರ, ಮರಣ ಹೊಂದಿದ, ನಕಲಿ (ಡುಪ್ಲಿಕೇಟ್) ಮತ್ತು ಇತರೆ ಮತದಾರರ ಮಾಹಿತಿಯನ್ನು ಜಿಲ್ಲಾ ಚುನಾವಣಾಧಿಕಾ-ರಿಗಳಾದ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಮಾಹಿತಿ ನೀಡಿದ್ದಾರೆ

ಕ್ಷೇತ್ರವಾರು ಎಎಸ್ ಡಿಡಿಒ ಮತದಾರರ ವಿವರ:

ಮುದ್ದೇಬಿಹಾಳ ಮತಕ್ಷೇತ್ರದಲ್ಲಿ 2,959 ಮತದಾರರು ಗೈರು, 19448 ಶಾಶ್ವತವಾಗಿ ಸ್ಥಳಾಂತರಗೊಂಡರೆ, 8, 847 ಮತದಾರರು ಮೃತಪಟ್ಟಿದ್ದರೆ, 4729 ನಕಲಿ, 25 ಇತರೇ ಸೇರಿ 36,008 ಎಎಸ್ ಡಿಡಿಒ ಮತದಾರರು ಪತ್ತೆಯಾಗಿದ್ದಾರೆ ಎಂದವರು ತಿಳಿಸಿದ್ದಾರೆ.


ದೇವರ ಹಿಪ್ಪರಗಿ ಮತಕ್ಷೇತ್ರದಲ್ಲಿ: 836 ಮತದಾರರು ಗೈರು, 18664 ಶಾಶ್ವತವಾಗಿ ಸ್ಥಳಾಂತರಗೊಂಡರೆ, 7941 ಮತದಾರರು ಮೃತಪಟ್ಟಿದ್ದರೆ, 2993 ನಕಲಿ, ಇತರೇ 70 ಸೇರಿ 30504 ಎಎಸ್ ಡಿಡಿಒ ಮತದಾರರು ಪತ್ತೆಯಾಗಿದ್ದಾರೆ ಎಂದವರು ತಿಳಿಸಿದ್ದಾರೆ.

ಬಸವನಬಾಗೇವಾಡಿ: ಮತಕ್ಷೇತ್ರದಲ್ಲಿ 1,494 ಮತದಾರರು ಗೈರು, 13063 ಶಾಶ್ವತವಾಗಿ ಸ್ಥಳಾಂತರಗೊಂಡರೆ, 6039 ಮತದಾರರು ಮೃತಪಟ್ಟರೆ, 4423 ನಕಲಿ, ಇತರೇ 42 ಸೇರಿ 25061 ಎಎಸ್ ಡಿಡಿಒ ಮತದಾರರು ಪತ್ತೆಯಾಗಿದ್ದಾರೆ.

ಬಬಲೇಶ್ವರ: ಮತಕ್ಷೇತ್ರದಲ್ಲಿ 1,487 ಮತದಾರರು ಗೈರು, 15,167 ಶಾಶ್ವತವಾಗಿ ಸ್ಥಳಾಂತರಗೊಂಡರೆ, 5,264 ಮತದಾರರು ಮೃತಪಟ್ಟರೆ, 2,334 ನಕಲಿ, ಇತರೇ 39 ಸೇರಿ 24,291 ಎಎಸ್ ಡಿಡಿಒ ಮತದಾರರು ಪತ್ತೆಯಾಗಿದ್ದಾರೆ.

ವಿಜಯಪುರ ನಗರ: ಮತಕ್ಷೇತ್ರದಲ್ಲಿ 39,450 ಮತದಾರರು ಗೈರು, 24,661 ಮತದಾರರು ಶಾಶ್ವತವಾಗಿ ಸ್ಥಳಾಂತರಗೊಂಡರೆ, 8058 ಮತದಾರರು ಮೃತಪಟ್ಟರೆ, 8,249 ನಕಲಿ, ಇತರೇ 131 ಸೇರಿ 80,549 ಎಎಸ್ ಡಿಡಿಒ ಮತದಾರರು ಪತ್ತೆಯಾಗಿದ್ದಾರೆ.

ನಾಗಠಾಣ: ಮತಕ್ಷೇತ್ರದಲ್ಲಿ 8,624 ಮತದಾರರು ಗೈರು, 22,684 ಮತದಾರರು ಶಾಶ್ವತವಾಗಿ ಸ್ಥಳಾಂತರಗೊಂಡರೆ, 6,580 ಮತದಾರರು ಮೃತಪಟ್ಟರೆ, 2,953 ನಕಲಿ, ಇತರೇ 70 ಸೇರಿ 40,911 ಎಎಸ್ ಡಿಡಿಒ ಮತದಾರರು ಪತ್ತೆಯಾಗಿದ್ದಾರೆ.



ಇಂಡಿ: ಮತಕ್ಷೇತ್ರದಲ್ಲಿ 2,870 ಮತದಾರರು ಗೈರು, 17,754 ಮತದಾರರು ಶಾಶ್ವತವಾಗಿ ಸ್ಥಳಾಂತರಗೊಂಡರೆ, 5,956 ಮತದಾರರು ಮೃತಪಟ್ಟರೆ, 2,259 ನಕಲಿ, ಇತರೇ 81 ಸೇರಿ 28,920 ಎಎಸ್ ಡಿಡಿಒ ಮತದಾರರು ಪತ್ತೆಯಾಗಿದ್ದಾರೆ.

ಸಿಂದಗಿ: ಮತಕ್ಷೇತ್ರದಲ್ಲಿ 2,662 ಗೈರು, 20,902 ಮತದಾರರು ಶಾಶ್ವತವಾಗಿ ಸ್ಥಳಾಂತರಗೊಂಡರೆ, 5,976 ಮತದಾರರು ಮೃತಪಟ್ಟರೆ, 2,427 ನಕಲಿ ಇತರೇ 83 ಸೇರಿ 32,050 ಎಎಸ್ ಡಿಡಿಒ ಮತದಾರರು ಪತ್ತೆಯಾಗಿದ್ದಾರೆ.

ಜಿಲ್ಲೆಯಾದ್ಯಂತ ಒಟ್ಟಾರೆ, 60,382 ಮತದಾರರು ಗೈರು ಉಳಿದಿದ್ದರೆ, 1,52,343 ಮತದಾರರು ಶಾಶ್ವತವಾಗಿ ಸ್ಥಳಾಂತರಗೊಂಡಿದ್ದಾರೆ. 54,661 ಮತದಾರರು ಮೃತಪಟ್ಟಿದ್ದಾರೆ. 30,367 ನಕಲಿ, ಇತರೇ 541 ಸೇರಿ ಒಟ್ಟು 2,98,294 ಎಎಸ್ ಡಿಡಿಒ ಮತದಾರರು ಪತ್ತೆಯಾಗಿದ್ದಾರೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಪ್ರತಿ ಮತಗಟ್ಟೆವಾರು ಸಂಪೂರ್ಣ ಹೆಸರು ಮತ್ತು ವಿಳಾಸ ಒಳಗೊಂಡ ಎಎಸ್ ಡಿಡಿಒ ಪಟ್ಟಿಯನ್ನು ಮತಗಟ್ಟೆ ಅಧಿಕಾರಿಗಳು, ಏಜೆಂಟರುಗಳು, ತಾಲೂಕು ಪಂಚಾಯತಿ ಹಾಗೂ ಗ್ರಾಮ ಪಂಚಾಯತಿಗಳ ಮಾಹಿತಿ ಫಲಕಗಳಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಚುರಪಡಿಸಲಾಗಿದೆ ಎಂದವರು ತಿಳಿಸಿದ್ದಾರೆ.

ಜಿಲ್ಲೆಯ ಎಲ್ಲ ಮಾನ್ಯತೆ ಪಡೆದ ರಾಜ-ಕೀಯ ಪಕ್ಷಗಳಿಗೆ ಹಾಗೂ ಮತದಾರರ ನೋಂದಣಾಧಿಕಾರಿಗಳಿಗೆ ಈ ಪಟ್ಟಿಯ ಒಂದು ಪ್ರತಿಯನ್ನು ಈಗಾಗಲೇ ತಲುಪಿಸಲಾಗಿದೆ.

ಸಾರ್ವಜನಿಕರು ಜಿಲ್ಲಾಡಳಿತದ ಅಧಿಕೃತ ವೆಬ್ ಸೈಟ್ :ತುರಿಚಿಥಿಚಿರಿಣಡಿಚಿ.ಟಿಥಿ.ಟಿ ಮೂಲಕ ಅಥವಾ ನೀಡಿರುವ ಗೂಗಲ್ ಡ್ರೈವ್ ಲಿಂಕ್ ಬಳಸಿ ಪರಿಶೀಲಿಸಬಹುದಾಗಿದೆ.

ಆಕ್ಷೇಪಣೆ ಸಲ್ಲಿಕೆಗೆ ಆ.17 ಕೊನೆಯ ದಿನವಾಗಿದೆ. ಅಧಿಕಾರಿಗಳು ಗುರುತಿಸಿರುವ ಎಎಸ್ ಡಿಡಿಒ ಪಟ್ಟಿಯ ಕುರಿತು ಆಕ್ಷೇಪಣೆಗಳಿದ್ದರೆ, ಸಂಬಂಧಪಟ್ಟ ಮತದಾರರ ನೋಂದಣಾಧಿಕಾರಿಗಳಿಗೆ ಆ. 17 ಸಲ್ಲಿಸಬಹುದು. ತದನಂತರ ಅಧಿಕಾರಿಗಳು ಮರುಪರಿಶೀಲನೆ ನಡೆಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಿದ್ದಾರೆ ಎಂದವರು ತಿಳಿಸಿದ್ದಾರೆ.


ಆ. 17ರೊಳಗೆ ನಮೂನೆ ಹಿಂತಿರುಗಿಸಿ: ಎಸ್ಐಆರ್ ಗೆ ಸಂಬಂಧಿಸಿದಂತೆ ಗಣತಿ ನಮೂನೆಗಳ ಗಣಕೀಕರಣ ಕಾರ್ಯ ಪೂರ್ಣಗೊಂಡಿದೆ. ಪರಿಷ್ಕೃತ ವೇಳಾಪಟ್ಟಿಯಂತೆ ಸಾರ್ವಜನಿಕರು ಭರ್ತಿ ಮಾಡಿದ ಗಣತಿ ನಮೂನೆಗಳನ್ನು ಆ. 17ರೊಳಗಾಗಿ ಸಲ್ಲಿಸಲು ತಮ್ಮ ಮತಗಟ್ಟೆ ಅಧಿಕಾ-ರಿಗಳಿಗೆ ಸಲ್ಲಿಸಬೇಕು ಎಂದವರು ತಿಳಿಸಿದ್ದಾರೆ.


ಸೇರ್ಪಡೆಗೆ ನಮೂನೆ-6 ಸಲ್ಲಿಸಿ: ಆ.24 ರಿಂದ ಸೆ. 23 ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿದೆ. ಈ ಅವಧಿಯಲ್ಲಿ ಅರ್ಹ ಮತದಾರರು ಅಗತ್ಯ ದಾಖಲೆಗಳೊಂದಿಗೆ ನಮೂನೆ-6 ನ್ನು ಸಲ್ಲಿಸಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರ್ಪಡೆಗೊಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ನಾಗರಿಕರು ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬಹುದಾಗಿದೆ ಎಂದವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ



ಶ್ರೀ ಡಿ ಕೆ ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು







ಡಾ. ಜಿ. ಪರಮೇಶ್ವರ
ಮಾನ್ಯ ಉಪಮುಖ್ಯಮಂತ್ರಿಗಳು

ನಾಡಿನ ಸಮಸ್ತ ಜನತೆಗೆ

# 80ನೇ

## ಸ್ವಾತಂತ್ರ್ಯ ದಿನಾಚರಣೆಯ

ಶುಭಾಶಯಗಳು



# ಯುವ ಕರ್ನಾಟಕ ನವ ಭಾರತ

ಇಂದು ನಮಗೆ ನಿಜವಾದ '**ಸ್ವಾತಂತ್ರ್ಯ**' ಎಂದರೆ ಯುವಜನತೆ ಹೊಸ ಕನಸುಗಳನ್ನು ಕಾಣುವ ಅವಕಾಶ, ಹಸಿವಿನಿಂದ ಮುಕ್ತಿ, ಆರ್ಥಿಕ ಆತಂಕವಿಲ್ಲದ ನೆಮ್ಮದಿ, ಮಹಿಳೆಯರ ಬದುಕಿನಲ್ಲಿ ಆತ್ಮವಿಶ್ವಾಸ, ಹಾಗೂ ಪ್ರತಿಯೊಬ್ಬರಿಗೂ ಸಿಗುವ ಗೌರವಯುತ ಬದುಕು. ಇದನ್ನು ಸಾಕಾರಗೊಳಿಸುತ್ತಿರುವ **ಐದು ಗ್ಯಾರಂಟಿ ಯೋಜನೆಗಳು** ಪ್ರತಿಯೊಬ್ಬರ ಜೀವನಕ್ಕೂ ಹೊಸ ಆಶಾಕಿರಣವಾಗಿವೆ.

**ಮಹಾತ್ಮ ಗಾಂಧೀಜಿ**ಯವರ '**ಅಂತ್ಯೋದಯ**' ಹಾಗೂ '**ಸರ್ವೋದಯ**' ತತ್ವಗಳು ಮತ್ತು **ಡಾ. ಬಿ. ಆರ್. ಅಂಬೇಡ್ಕರ್** ಅವರ **ಸಾಂವಿಧಾನಿಕ ಮೌಲ್ಯ**ಗಳ ದಾರಿಯಲ್ಲಿ ಹೆಜ್ಜೆಯಿಡುತ್ತಿರುವ ನಾವು, ಯುವಜನತೆಯ ಶಕ್ತಿಯೊಂದಿಗೆ '**ಯುವ ಕರ್ನಾಟಕ, ನವ ಭಾರತ**'ಕ್ಕಾಗಿ **ಕರ್ನಾಟಕ ಅಭಿವೃದ್ಧಿ ಮಾದರಿ**ಯನ್ನು ನಿರ್ಮಿಸುತ್ತಿದ್ದೇವೆ.

**ಕನ್ನಡಿಗರ ಸಬಲೀಕರಣವೇ ನಮ್ಮ ದೃಢ ಸಂಕಲ್ಪ, ಅದುವೇ ನಮಗೆ ನಿಜ ಸ್ವಾತಂತ್ರ್ಯ.**

ಗ್ಯಾರಂಟಿ ಸರ್ಕಾರ

ಶಕ್ತಿ ಅನ್ನಭಾಗ್ಯ ಗೃಹ ಜ್ಯೋತಿ ಗೃಹಲಕ್ಷ್ಮಿ ಯುವನಿಧಿ

ಸ್ಕ್ಯಾನ್ ಮಾಡಿ,
ಸ್ವಾತಂತ್ರ್ಯದ ಸಂದೇಶ ಕೇಳಿ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

CMofKarnataka https://dipr.karnataka.gov.in/ Karnatakavarthe ಕರ್ನಾಟಕ ವಾರ್ತೆ